**KAHS610006372008**

## 1ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚನ್ನರಾಯಪಟ್ಟಣ.

**ಉಪಸ್ಥಿತರು : ಶ್ರೀ ಪುರುಷೋತ್ತಮ ಟಿ.ಪಿ. ಬಿ.ಎ., ಎಲ್.ಎಲ್.ಬಿ.**
1ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.

**ಅಸಲು ದಾವಾ ಸಂಖ್ಯೆ 270/2008**

ದಿನಾಂಕ **: 17** ನೇ ಜೂನ್ **2026**

**ವಾದಿಃ**

ಶ್ರೀಮತಿ ಜಯಮ್ಮ ಕೋಂ ವೆಂಕಟರಮಣ,
ಸುಮಾರು 65 ವರ್ಷ ವಯಸ್ಸು,
ಮಾರೇನಹಳ್ಳಿ ಗ್ರಾಮ ,
ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

**( ವಾದಿಯ ಪರ ಶ್ರೀ ಜಿ.ಎನ್ . ಆರ್, ವಕೀಲರು)**

**-ವಿರುದ್ಧ-**

**ಪ್ರತಿವಾದಿಯರುಃ**

1. ವೆಂಕಟೇಗೌಡ ಬಿನ್ ಲೇಟ್ ರಂಗೇಗೌಡ ,
ಸುಮಾರು 80 ವರ್ಷ ವಯಸ್ಸು,
ಮಾರೇನಹಳ್ಳಿ ಗ್ರಾಮ,
ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

2. ರಂಗೇಗೌಡ ಉಃ ಅಣ್ಣಿ **(ಮೃತಪಟ್ಟಿರುತ್ತಾರೆ)**
ಬರಗೂರು ಗ್ರಾಮ,
ದಂಡಿಗನಹಳ್ಳಿ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

**ಇವರು ಪೌತಿಯಾದ ಕಾರಣ ಇವರ**
**ಕಾನೂನುಬದ್ಧ ವಾರಸುದಾರರು**

2(ಎ) ಚಂದ್ರು ಬಿನ್ ಲೇಟ್ ರಂಗೇಗೌಡ ಉಃ ಅಣ್ಣ ,
ಸುಮಾರು 50 ವರ್ಷ ವಯಸ್ಸು,
ಮಾರೇನಹಳ್ಳಿ ಗ್ರಾಮ,
ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

2(ಬಿ) ಮಂಜೇಗೌಡ ಬಿನ್ ಲೇಟ್ ರಂಗೇಗೌಡ ಉಃ ಅಣ್ಣ
ಸುಮಾರು 48 ವರ್ಷ ವಯಸ್ಸು,
ಬರಗೂರು ಗ್ರಾಮ,
ದಂಡಿಗನಹಳ್ಳಿ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

2(ಸಿ). ತಮ್ಮಯ್ಯ ಬಿನ್ ಲೇಟ್ ರಂಗೇಗೌಡ ಉಃ ಅಣ್ಣ ,
ಸುಮಾರು 45 ವರ್ಷ ವಯಸ್ಸು,
ಗೋವಿನಹಳ್ಳಿ ಗ್ರಾಮ,
ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

2(ಡಿ) ಗೋವಿಂದ ಬಿನ್ ಲೇಟ್ ರಂಗೇಗೌಡ ಉಃ ಅಣ್ಣ ,
ಸುಮಾರು 43 ವರ್ಷ ವಯಸ್ಸು,
ಮಾರೇನಹಳ್ಳಿ ಗ್ರಾಮ,
ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

2(ಇ) ಕುಮಾರ ಬಿನ್ ಲೇಟ್ ರಂಗೇಗೌಡ ಉಃ ಅಣ್ಣ ,
ಸುಮಾರು 40 ವರ್ಷ ವಯಸ್ಸು,
ಬರಗೂರು ಗ್ರಾಮ,
ದಂಡಿಗನಹಳ್ಳಿ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

2(ಎಫ್) ಮಂಜುಳ ಬಿನ್ ಲೇಟ್ ರಂಗೇಗೌಡ ಉಃ ಅಣ್ಣ ,
ಸುಮಾರು 35 ವರ್ಷ ವಯಸ್ಸು,
ಮಾರೇನಹಳ್ಳಿ ಗ್ರಾಮ,
ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

3. ಜಯಮ್ಮ ಕೋಂ ಲೇಟ್ ವೆಂಕಟೇಗೌಡ ,
ಸುಮಾರು 30 ವರ್ಷ ವಯಸ್ಸು,
ಮಾರೇನಹಳ್ಳಿ ಗ್ರಾಮ,
ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

**(**ಪ್ರತಿವಾದಿ **1 (**ಮರಣ ಹೊಂದಿರುತ್ತಾರೆ **)**
ಪ್ರತಿವಾದಿ **2(a),(c), (d), (e) & )(f)**
**&** ಪ್ರತಿವಾದಿ**-3** ಕೆ**.** ಎನ್ ಎಸ**.** ಆರ್ ವಕೀಲರು
ಪ್ರತಿವಾದಿ **2(b) Absent)**

| | |
|---|---|
| 1. ದಾವಾ ದಾಖಲುಮ ಮಾಡಿದ ದಿನಾಂಕ | 21-07-2008 |
| 2. ದಾವಾ ಸ್ವರೂಪ | ವಿಭಾಗ ಮತ್ತು ಪ್ರತ್ಯೇಕ ಸ್ವಾ ಧೀನ ಕೋರಿ |
| 3. ಸಾಕ್ಷ್ಯಾದಾರ ಹಾಜರು ಪಡಿಸಿದ ದಿನಾಂಕ | 17-11-2008 |
| 4. ತೀರ್ಪು ಉಚ್ಚರಿಸಿದ ದಿನಾಂಕ | 17-06-2026 |
| 5. ಒಟ್ಟು ದಾವಾ ಅವಧಿ | ವರ್ಷ ತಿಂಗಳು ದಿನಾಂಕ<br>17 10 27 |

**(ಪುರುಷೋತ್ತಮ ಟಿ.ಪಿ)**
1 ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.**

# ::ತೀರ್ಪು::

ದಾವಾ ಅನುಸೂಚಿ ಸ್ವತ್ತುಗಳಲ್ಲಿ ವಾದಿಗಿರುವ 1/3ನೇ ಭಾಗದ ಹಿಸ್ಸೆಯನ್ನು ಪ್ರತಿವಾದಿಯರಿಂದ ಪ್ರತ್ಯೇಕಿಸಿಕೊಂಡು ಸ್ವಾಧೀನ ಹೊಂದುವಂತೆ ಕೋರಿ ಸದರಿ ದಾವೆಯನ್ನು ಸಲ್ಲಿಸಿರುತ್ತಾರೆ.

## 2. ವಾದ ಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.

1 ನೇ ಪ್ರತಿವಾದಿ ವೆಂಕಟೇಗೌಡ ವಾದಿಯ ತಂದೆಯಾಗಿದ್ದು, 1ನೇ ಪ್ರತಿವಾದಿ ಹಾಗೂ ಆತನ ತಮ್ಮ ರಂಗೇಗೌಡ ಸುಮಾರು 50 ವರ್ಷಗಳ ಹಿಂದೆಯೇ ವಿಭಾಗವಾಗಿರುತ್ತಾರೆ. ದಾವಾ ಅನುಸೂಚಿ ಸ್ವತ್ತುಗಳು 1ನೇ ಪ್ರತಿವಾದಿಗೆ ಪಿತ್ರಾರ್ಜಿತವಾಗಿ ಬಂದಂತಹ ಸ್ವತ್ತುಗಳಾಗಿದ್ದು, ರೆವಿನ್ಯೂ ಖಾತೆಗಳು 1ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. 1ನೇ ಪ್ರತಿವಾದಿ ವೆಂಕಟೇಗೌಡರಿಗೆ ಹೊಂಬಾಳಮ್ಮ ಮತ್ತು ಜಯಮ್ಮ ಎಂಬ ಇಬ್ಬರು ಹೆಂಡತಿಯರಿದ್ದು, 1ನೇ ಹೆಂಡತಿ ಹೊಂಬಾಳಮ್ಮ ಮೂಲಕ ವಾದಿ ಹಾಗೂ 2ನೇ ಪ್ರತಿವಾದಿಯ ಹೆಂಡತಿ ಸಾವಿತ್ರಮ್ಮ ಜನಿಸಿರುತ್ತಾರೆ. 1ನೇ ಪ್ರತಿವಾದಿಯ 2ನೇ ಹೆಂಡತಿ ಜಯಮ್ಮನಿಗೆ ಯಾವುದೇ ಸಂತಾನವಿರುವುದಿಲ್ಲ. 1ನೇ ಪ್ರತಿವಾದಿಯ 2ನೇ ಮಗಳಾದ ಸಾವಿತ್ರಮ್ಮಳನ್ನು ಬರಗೂರು ಗ್ರಾಮದ 2ನೇ ಪ್ರತಿವಾದಿಗೆ ವಿವಾಹ ಮಾಡಿಕೊಟ್ಟಿರುತ್ತಾರೆ. ವಾದಿಯನ್ನು ಮಾರೇನಹಳ್ಳಿ ಗ್ರಾಮದ ವೆಂಕಟರಮಣರವರಿಗೆ ವಿವಾಹ ಮಾಡಿಕೊಟ್ಟಿದ್ದರೂ ವಾದಿಯು 1ನೇ ಪ್ರತಿವಾದಿಯ ಜೊತೆಯಲ್ಲೇ ವಾಸ ಮಾಡಿಕೊಂಡಿರುತ್ತಾರೆ. ವಿದ್ಯಮಾನಗಳಗು ಹೀಗಿರುವಾಗ ದಾವಾ ಅನುಸೂಚಿ ಸ್ವತ್ತುಗಳನ್ನು ವಾದಿ ಹಾಗೂ 1ನೇ ಪ್ರತಿವಾದಿ ಒಟ್ಟಾಗಿ ಅನುಭವ ಮಾಡುತ್ತಿರುತ್ತಾರೆ. 1ನೇ ಪ್ರತಿವಾದಿ ಇಳಿವಯಸ್ಸಿನವನಾದ ಕಾರಣ ವಾದಿಯ ಗಂಡನೂ ಸಹ ಸದರಿ ಜಮೀನುಗಳ ಸಾಗುವಳಿಗೆ ಸಹಾಯ ಮಾಡಿಕೊಂಡು ಬರುತ್ತಿರುತ್ತಾನೆ.

3. ಈ ಮಧ್ಯೆ ಸುಮಾರು 16 ವರ್ಷಗಳ ಹಿಂದೆ 1ನೇ ಪ್ರತಿವಾದಿಯು ವಾದಿಗೆ ಆಗದವರ ಚಿತಾವಣೆಯ ಮೇರೆಗೆ ದಾವಾಸ್ತಿಗಳನ್ನು ಪೋಲು ಮಾಡುವ ಸಂಧರ್ಭದಲ್ಲಿದ್ದಾಗ ಗ್ರಾಮಸ್ಥರೆಲ್ಲರೂ ಸೇರಿ 1ನೇ ಪ್ರತಿವಾದಿಗೆ ಯಾವುದೇ ಗಂಡು ಸಂತಾನವಿಲ್ಲದ ಕಾರಣ ದಾವಾಸ್ತಿಗಳನ್ನು ಇಬ್ಬರು ಹೆಣ್ಣು ಮಕ್ಕಳುಗಳ ನಡುವೆ ಪಾಲು ಮಾಡಿಕೊಡಬೇಕೆಂದು ತೀರ್ಮಾನಿಸಿದ್ದರು. ಅದರಂತೆ 1ನೇ ಪ್ರತಿವಾದಿಯು

ಕೇವಲ ಕೆಲವು ಆಸ್ತಿಗಳಿಗೆ ಮಾತ್ರ ಮರಣಶಾಸನವನ್ನು 2ನೇ ಪ್ರತಿವಾದಿಯ ಮಕ್ಕಳ ಹೆಸರಿಗೆ ಬರೆದುಕೊಟ್ಟರು. ಆದರೆ ವಾದಿಗೆ ಯಾವುದೇ ಆಸ್ತಿಗಳನ್ನು ಭಾಗ ಮಾಡಿಕೊಡದೇ ಕಾಲಹರಣ ಮಾಡುತ್ತಿದ್ದ ಮೇರೆಗೆ 1ನೇ ಪ್ರತಿವಾದಿಯು 2ನೇ ಪ್ರತಿವಾದಿಯ ಮಕ್ಕಳುಗಳಿಗೆ ಮಾಡಿದ್ದ ಮರಣ ಶಾಸನವನ್ನು ರದ್ದುಪಡಿಸಿ ದಾವಾಸ್ತಿಗಳನ್ನು ಉಭಯತ್ರರಿಗೂ ಸಮಾರ್ಧ ಭಾಗವಾಗಿ ಹಂಚಿಕೊಡುವುದಾಗಿ ಒಪ್ಪಿಕೊಂಡರು. ದಾವಾ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ಕೆಲವು ದಾಖಲಾತಿಗಳನ್ನು ಬರೆದು ಯಾವುದೇ ಅವಶ್ಯಕತೆ ಇಲ್ಲದಿದ್ದರೂ ಬೇರೆಯವರಿಗೆ ಪರಭಾರೆ ಮಾಡಿದ್ದಲ್ಲಿ ವಾದಿಗೆ ಇರುವ ನ್ಯಾಯಯುತವಾದ ಭಾಗಾಂಶದ ಹಕ್ಕಿಗೆ ಲೋಪ ಉಂಟಾಗುವ ಸಂಭವಿರುತ್ತದೆ. ಆದ್ದರಿಂದ ಅನ್ಯಮಾರ್ಗವಿಲ್ಲದೇ ವಾದಿಯು ದಾವಾ ಅನುಸೂಚಿ ಸ್ವತ್ತುಗಳಲ್ಲಿರುವ ನ್ಯಾಯಯುತವಾದ 1/3 ಭಾಗವನ್ನು ಪ್ರತ್ಯೇಕ ಸ್ವಾಧೀನ ವಹಿಸುವಂತೆ ಕೋರಿ ಸದರಿ ದಾವೆಯನ್ನು ಸಲ್ಲಿಸಿದ್ದು, ದಾವೆಯಲ್ಲಿ ಕೇಳಿಕೊಂಡಂತೆ ಪರಿಹಾರವನ್ನು ನೀಡಬೇಕೆಂದು ಕೋರಿಕೊಂಡಿದ್ದಾರೆ.

4. ಪ್ರತಿವಾದಿಯರಿಗೆ ನ್ಯಾಯಾಲಯದಿಂದ ದಾವಾ ಸಮನ್ಸ್ ಹೊರಡಿಸಿದ್ದು, ಸಮನ್ಸ್ ಜಾರಿಯಾಗಿದ್ದು, ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ಲಿಖಿತ ಹೇಳಿಕೆಯಲ್ಲಿ ತಿಳಿಸುವುದೇನೆಂದರೆ, 1ನೇ ಪ್ರತಿವಾದಿ ವೆಂಕಟೇಗೌಡನು ವಾದಿಯ ತಂದೆಯಾಗಿದ್ದು, 1ನೇ ಪ್ರತಿವಾದಿ ಹಾಗೂ ಆತನ ತಮ್ಮ ರಂಗೇಗೌಡ ಸುಮಾರು 50 ವರ್ಷಗಳ ಹಿಂದೆ ವಿಭಾಗವಾಗಿರುತ್ತಾರೆ ಹಾಗೂ 1ನೇ ಪ್ರತಿವಾದಿ ವೆಂಕಟೇಗೌಡರಿಗೆ ಹೊಂಬಾಳಮ್ಮ ಮತ್ತು ಜಯಮ್ಮ ಎಂಬ ಇಬ್ಬರು ಹೆಂಡತಿಯರು ಇರುತ್ತಾರೆ. 1ನೇ ಹೆಂಡತಿ ಹೊಂಬಾಳಮ್ಮನ ಮೂಲಕ ವಾದಿ ಮತ್ತು 2ನೇ ಪ್ರತಿವಾದಿಯ ಹೆಂಡತಿ ಸಾವಿತ್ರಮ್ಮ ಜನಿಸಿರುತ್ತಾರೆ. 1ನೇ ಪ್ರತಿವಾದಿಯ 2ನೇ ಹೆಂಡತಿ ಜಯಮ್ಮಳಿಗೆ ಯಾವುದೇ ಮಕ್ಕಳ ಸಂತಾನವಿರುವುದಿಲ್ಲ. 1ನೇ ಪ್ರತಿವಾದಿಯ 2ನೇ ಮಗಳಾದ ಸಾವಿತ್ರಮ್ಮಳನ್ನು ಬರಗೂರು ಗ್ರಾಮದ 2ನೇ ಪ್ರತಿವಾದಿಗೆ ವಿವಾಹ ಮಾಡಿಕೊಟ್ಟಿದ್ದು ವಾದಿಯನ್ನು ಮಾರೇನಹಳ್ಳಿ ಗ್ರಾಮದ ವೆಂಕಟರಮಣರಿಗೆ ಮದುವೆ ಮಾಡಿ ಕೊಟ್ಟಿರುತ್ತಾರೆ ಎಂದು

ಒಪ್ಪಿಕೊಂಡಿದ್ದು ಉಳಿದ ದಾವಾ ಪ್ಯಾರಾದ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ.

5. ಮುಂದುವರೆದು ಪ್ರತಿವಾದಿಯರು ತಿಳಿಸುವುದೇನೆಂದರೆ, ದಾವಾ ಷೆಡ್ಯೂಲ್ ಸ್ವತ್ತುಗಳು 1ನೇ ಪ್ರತಿವಾದಿಯ ತಂದೆ ರಂಗೇಗೌಡನಿಗೆ ಸೇರಿದ್ದು, ಸದರಿ ರಂಗೇಗೌಡರು ಅವರ ಮಕ್ಕಳುಗಳಾದ 1ನೇ ಪ್ರತಿವಾದಿ ವೆಂಕಟೇಗೌಡ ಹಾಗೂ 2ನೇ ಪ್ರತಿವಾದಿ ರಂಗೇಗೌಡ ಇವರುಗಳಿಗೆ ಕಾನೂನುಬದ್ಧ ಹಿಸ್ಸೆಯನ್ನು ಮೌಖಿಕವಾಗಿಯೇ 50 ವರ್ಷಗಳ ಹಿಂದೆಯೇ ಮಾಡಿಕೊಟ್ಟಿರುತ್ತಾರೆ. ಅಂದರೆ ದಾವಾ ಷೆಡ್ಯೂಲ್ ಸ್ವತ್ತುಗಳೆಲ್ಲಾ 1ನೇ ಪ್ರತಿವಾದಿಗೆ ಸ್ವಯಾರ್ಜಿತವಾಗಿ ಬಂದ ಸ್ವತ್ತುಗಳಾಗಿರುತ್ತದೆ. ಆದ್ದರಿಂದ ವಾದಿಗೆ ದಾವಾ ಅನುಸೂಚಿ ಸ್ವತ್ತುಗಳ ಮೇಲೆ ಯಾವುದೇ ಹಕ್ಕು, ಅಧಿಕಾರ ಇರುವುದಿಲ್ಲ ಮತ್ತು 1ನೇ ಪ್ರತಿವಾದಿಗೆ ಅವರ ತಂದೆಯ ಮೂಲಕ 50 ವರ್ಷಗಳ ಹಿಂದೆಯೇ ಹಿಸ್ಸೆಯ ಮೂಲಕ ಬಂದಿರುವುದರಿಂದ ಪಿತ್ರಾರ್ಜಿತ ಆಸ್ತಿಯಾಗಿರುವುದಿಲ್ಲ ಎಲ್ಲವೂ 1ನೇ ಪ್ರತಿವಾದಿಯ ಸ್ವಯಾರ್ಜಿತವಾದ ಸ್ವತ್ತಾಗಿರುತ್ತದೆ. ಮತ್ತು ವಾದಿಗೆ 1ನೇ ಪ್ರತಿವಾದಿಯು ಮರಣ ಶಾಸನ ಪತ್ರ ಬರೆದುಕೊಟ್ಟಿದೆ ಎನ್ನಲಾಗಿರುವ ಹಾಗೂ ಬರೆದುಕೊಡುವ ಮರಣ ಶಾಸನ ಪತ್ರದ ಬಗ್ಗೆ ಪ್ರಶ್ನೆ ಮಾಡುವ ಹಕ್ಕು ಅಧಿಕಾರ ವಾದಿಗೆ ಇರುವುದಿಲ್ಲ. 1ನೇ ಪ್ರತಿವಾದಿಯು ಬದುಕಿರುವ ತನಕ ವಾದಿಗೆ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ಹಿಸ್ಸೆ ಕೇಳುವ ಹಕ್ಕು ಅಧಿಕಾರ ಇರುವುದಿಲ್ಲ. ಕಾರಣ ದಾವಾ ಸ್ವತ್ತುಗಳೆಲ್ಲ 1ನೇ ಪ್ರತಿವಾದಿಯ ಸ್ವಯಾರ್ಜಿತವಾದ ಸ್ವಂತ ಆಸ್ತಿಯಾಗಿರುತ್ತದೆ.

6. 1ನೇ ಪ್ರತಿವಾದಿಯ 2ನೇ ಮಗಳು ಸಾವಿತ್ರಮ್ಮಳಿಗೆ ಒಟ್ಟು 5 ಜನ ಗಂಡು ಮಕ್ಕಳು, ಒಬ್ಬಳು ಹೆಣ್ಣುಮಗಳು ಇದ್ದು ಅವರುಗಳನ್ನು ಈ ದಾವೆ ಅತ್ಯಾವಶ್ಯಕ ಪಾರ್ಟಿಗಳನ್ನಾಗಿ ಮಾಡದೇ ವಾದಿಯು ದಾವಾ ತಂದಿರುತ್ತಾರೆ. ಆದುದರಿಂದ ವಾದಿಯು ತಂದಿರುವ ದಾವಕ್ಕೆ ಆವಶ್ಯಕಪಕ್ಷಕಾರರ ಕೊರತೆ ಉಂಟಾಗಿರುವುದರಿಂದ ವಾದಿಯ ದಾವೆಯು ನಿಲ್ಲತಕ್ಕದ್ದಲ್ಲ. ವಾದಿಯು ಹಾಲಿ

ದಾವೆಯನ್ನು ಮೌಲ್ಯೀಕರಿಸಿ ಹಾಗೂ ಈ ದಾವೆಯೊಡನೆ ಹಾಜರುಪಡಿಸಿರುವ ನ್ಯಾಯಾಲಯದ ಶುಲ್ಕವು ಕಡಿಮೆ ಇರುತ್ತದೆ. ಪ್ರತಿವಾದಿಗೆ ಅವರ ತಂದೆಯ ಮೂಲಕ ಈಗ್ಗೆ 50 ವರ್ಷಗಳ ಹಿಂದೆಯೇ ಹಿಸ್ಸೆಗೆ ಬಂದ ಸ್ವತ್ತುಗಳು ಸ್ವಯಾರ್ಜಿತ ಸ್ವತ್ತುಗಳಾಗಿದ್ದು, ಅವುಗಳಲ್ಲದೇ ಕೆಲವು ಸ್ವತ್ತುಗಳನ್ನು ತನ್ನ 2ನೇ ಮಗಳು ಸಾವಿತ್ರಮ್ಮಳ ಮನೆಯಿಂದ ಹಣ ತಂದು ಖರೀದಿಸಿದ್ದು, ಅವುಗಳನ್ನು ಕುಟುಂಬದ ವ್ಯವಸ್ಥೆಗೋಸ್ಕರ ಸಾವಿತ್ರಮ್ಮಳ ಗಂಡನ ಅಣ್ಣತಮ್ಮಂದಿರು ಹಿಸ್ಸೆಗೆ ಬರುತ್ತಾರೆ ಎಂಬ ಉದ್ದೇಶದಿಂದ ಕೆಲವು ಸ್ವತ್ತುಗಳನ್ನು 1ನೇ ಪ್ರತಿವಾದಿಯ ಹೆಸರಿಗೆ ಕ್ರಯಕ್ಕೆ ಕೊಂಡು ಕೊಂಡು ಬರೆಸಿಕೊಂಡಿರುತ್ತಾರೆ. ಆ ಸ್ವತ್ತುಗಳು 1ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತಾಗಿರುತ್ತದೆ. ಮತ್ತು 1ನೇ ಪ್ರತಿವಾದಿಗೆ ಗಂಡು ಮಕ್ಕಳ ಸಂತಾನವಿಲ್ಲದಿದ್ದರಿಂದ ಸಾವಿತ್ರಮ್ಮಳ ಮಕ್ಕಳಾದ ಚಂದ್ರು ಮತ್ತು ಗೋವಿಂದ ಇವರುಗಳನ್ನು ಚಿಕ್ಕ ವಯಸ್ಸಿನಲ್ಲಿಯೇ  ಚಂದ್ರುವಿಗೆ 5 ವರ್ಷವಿದ್ದಾಗ ಮತ್ತು ಗೋವಿಂದನಿಗೆ 3 ವರ್ಷವಾಗಿದ್ದಾಗ ದತ್ತು ಸ್ವೀಕಾರದ ಮೂಲಕ ವೆಂಕಟೇಗೌಡ ಮತ್ತು ಹೊಂಬಾಳಮ್ಮ  ಇಬ್ಬರೂ ಸಹ ದತ್ತು ಸ್ವೀಕಾರ ಮಾಡಿಕೊಂಡು ಮಾರೇನಹಳ್ಳಿ ಗ್ರಾಮದಲ್ಲಿಯೇ ತಮ್ಮ ಮನೆಯಲ್ಲಿಯೇ ಇಟ್ಟುಕೊಂಡಿರುತ್ತಾರೆ. ಆದ್ದರಿಂದ ಸಾವಿತ್ರಮ್ಮಳ ಹಾಗೂ 2ನೇ ಪ್ರತಿವಾದಿಯ ಮಕ್ಕಳಾದ ಚಂದ್ರು, ಗೋವಿಂದೇಗೌಡ ಇವರುಗಳು 1ನೇ ಪ್ರತಿವಾದಿ ವೆಂಕಟೇಗೌಡ ಹಾಗೂ ಹೊಂಬಾಳಮ್ಮನ ದತ್ತು ಮಕ್ಕಳಾಗಿರುತ್ತಾರೆ. ಹೊಂಬಾಳಮ್ಮಳು ಈಗ್ಗೆ 19-09-2008 ರಂದು ಮರಣ ಹೊಂದಿರುತ್ತಾರೆ. ಈ ವಿಚಾರವನ್ನು ವಾದಿಯು ಗೌಪ್ಯವಾಗಿ ಬಚ್ಚಿಟ್ಟು ಅಕ್ರಮ ಪಾಯಿದೆ ಹೊಂದುವ ದೃಷ್ಟಿಯಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ. ಹೊಂಬಾಳಮ್ಮ ಬದುಕಿರುವ ವಿಚಾರವನ್ನು ವಾದಿಯು ದಾವಾ  ಸಲ್ಲಿಸಿರುವ ಕಾಲದಲ್ಲಿ ತಿಳಿಸಿರುವುದಿಲ್ಲ.  ದಾವಾಸ್ತಿಗಳ ಬೆಲೆ ಸುಮಾರು 16,00,000/- ರೂಗಳು ಬೆಲೆ ಬಾಳುತ್ತಿರುವುದರಿಂದ ಹಾಲಿ ದಾವೆಯು ಘನ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವುದಿಲ್ಲ ಮತ್ತು ದಾವಾ ಸ್ವತ್ತುಗಳು 1ನೇ ಪ್ರತಿವಾದಿಗೆ ಸ್ವಯಾರ್ಜಿತವಾದ ಸ್ವತ್ತುಗಳಾಗಿರುವುದರಿಂದ ಅವುಗಳನ್ನು ಪ್ರಶ್ನೆ ಮಾಡಿ ಕೇಳುವ ಹಕ್ಕು ವಾದಿಗೆ ಇರುವುದಿಲ್ಲ.

7. ದಾವಾಸ್ತಿಗಳು ಯಾವುವು ಸಹ ವಾದಿಗೆ ಪಿತ್ರಾರ್ಜಿತವಾದ ಸ್ವತ್ತುಗಳಾಗಿರುವುದಿಲ್ಲ. ಈಗಲೂ 1ನೇ ಪ್ರತಿವಾದಿಯ ನಿಗಾವಣೆಯನ್ನು 2ನೇ ಪ್ರತಿವಾದಿಯ ಮಕ್ಕಳಾದ ಚಂದ್ರು ಮತ್ತು ಗೋವಿಂದ ಇವರೇ ಪಾಲನೆ ಪೋಷಣೆಯನ್ನು ಮಾಡುತ್ತಾ ಬಂದಿರುತ್ತಾರೆ ಹಾಗೂ ಹೊಂಬಾಳಮ್ಮಳು ಮರಣ ಹೊಂದಿದ ನಂತರ ತಮ್ಮ ಕುಲಪದ್ಧತಿಯ ಪ್ರಕಾರ ಕಾರ್ಯಕ್ರಮವನ್ನು ಚಂದ್ರುರವರೇ ನೆರವೇರಿಸಿರುತ್ತಾರೆ. ಈಗಲೂ ಚಂದ್ರು ಮತ್ತು ಗೋವಿಂದರವರ ಎಲ್ಲಾ ಶಾಲಾ ದಾಖಲಾತಿಗಳಲ್ಲಿ ಇವರು ವೆಂಕಟೇಗೌಡರ ಮಕ್ಕಳೆಂದು ನಮೂದಾಗಿರುತ್ತದೆ. ಸದರಿ ವಿಚಾರ ವಾದಿಗೆ ತಿಳಿದಿರುತ್ತದೆ. ವಾದಿಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಿಸ್ಸಾ ಹಕ್ಕಾಗಲೀ ಇರುವುದಿಲ್ಲ. ವಾದಿಯು ದಾವಾ ಸ್ವತ್ತುಗಳನ್ನು ಜಂಟಿಯಾಗಿ ಅನುಭವಿಸಿಕೊಂಡು ಹೋಗುತ್ತಿರುವುದಿಲ್ಲ. ದಾವಾ ಸ್ವತ್ತನ್ನು 1ನೇ ಪ್ರತಿವಾದಿಯ 2ನೇ ಮಗಳಾದ ಸಾವಿತ್ರಮ್ಮಳ ಮಕ್ಕಳಾದ ಚಂದ್ರು ಮತ್ತು ಗೋವಿಂದ ರವರೇ ವ್ಯವಸಾಯ ಮಾಡಿಕೊಂಡು ಅಭಿವೃದ್ಧಿಪಡಿಸಿಕೊಂಡು ಬರುತ್ತಿರುತ್ತಾರೆ. ಸಾವಿತ್ರಮ್ಮಳ ಮಕ್ಕಳನ್ನು ವೆಂಕಟೇಗೌಡ ಮತ್ತು ಹೊಂಬಾಳಮ್ಮ ದತ್ತು ಸ್ವೀಕರಿಸಿದ ಕಾರಣ ಅವರನ್ನು ಈ ದಾವೆಯಲ್ಲಿ ಅತ್ಯಾವಶ್ಯಕ ಪಕ್ಕಗಾರರನ್ನಾಗಿ ಮಾಡದೇ ದಾವಾ ತಂದಿರುತ್ತಾರೆ.

8. ಮುಂದುವರೆದು 1(ಎ), (ಸಿ) ರಿಂದ (ಎಫ್) ರವರು ತಿಳಿಸುವುದೇನೆಂದರೆ, ವಾದಿಯ ತಂದೆ ಹಾಲಿ ಮರಣ ಹೊಂದಿರುವ 1ನೇ ಪ್ರತಿವಾದಿ ವೆಂಕಟೇಗೌಡ ಹಾಗೂ ಹಾಲಿ ವಾರಸುದಾರರಾದ 1(ಎ), 1(ಡಿ) ಇವರನ್ನು ಚಿಕ್ಕ ವಯಸ್ಸಿನಲ್ಲಿಯೇ ದತ್ತು ಸ್ವೀಕಾರವನ್ನು ಮಾಡಿಕೊಂಡಿದ್ದು ಅವರುಗಳ ಪಾಲನೆ ಪೋಷಣೆಯನ್ನು ಮುಂದೆಯೂ ಸಹ ಮಾಡುತ್ತಾರೆಂಬ ಉದ್ದೇಶದಿಂದ ವೆಂಕಟೇಗೌಡರ ಜೀವಿತಾವಧಿಯ ಕಾಲದಲ್ಲಿ ದಿಃ 17-01-1985 ರಂದು ನೋಂದಾಯಿತ ಮರಣ ಶಾಸನ ಪತ್ರವನ್ನು ಬರೆದಿಟ್ಟಿರುತ್ತಾರೆ. ಮರಣ ಶಾಸನ ಪತ್ರವನ್ನು ವೆಂಕಟೇಗೌಡರು ಬರೆದಿಟ್ಟಿರುವ ವಿಚಾರ ಈ ಪ್ರತಿವಾದಿಯರ ಸಂಬಧಿಕರ ಮೂಲಕವೇ 1ನೇ

ಪ್ರತಿವಾದಿಯು ಮರಣ ಹೊಂದಿದ ನಂತರವೇ ತಿಳಿದು ಬಂದಿರುತ್ತದೆ. ಆನಂತರ ವಾದಿಯೂ ಸಹ ಹಿಸ್ಸೆ ಬರಬೇಕೆಂದು ಹಾಲಿ ಮರಣ ಹೊಂದಿರುವ ವೆಂಕಟೇಗೌಡರನ್ನು ಕೋರಿಕೊಂಡಿದ್ದು, ಆ ಸಂಬಂಧವಾಗಿ ವಾದಿಗೆ ದಿಃ 11-03-1992 ರಂದು ಒಂದು ಪಂಚಾಯಿತಿ ಕರಾರು ಪತ್ರವನ್ನು ವಾದಿಯು ವೆಂಕಟೇಗೌಡರಿಂದ ಬರೆದುಕೊಟ್ಟು ಸರ್ವೆ. ನಂ. 4/19 ರಲ್ಲಿ ಐದುವರೆ ಗುಂಟೆ ಮತ್ತು 87/3 ರಲ್ಲಿ ನಾಲ್ಕುವರೆ ಗುಂಟೆ ಸ್ವತ್ತನ್ನು ಪಡೆದುಕೊಂಡು ಸ್ವತ್ತಿನ ಸ್ವಾಧೀನ ವಹಿಸಿಕೊಂಡಿರುತ್ತಾರೆ ಮತ್ತು ಊರಿನ ಮಾರಮ್ಮ ದೇವಸ್ಥಾನದ ಬಳಿ ಇರುವ ಒಂದು ಮನೆಯನ್ನು ಸಹಾ ವಾದಿಗೆ ನೀಡಿರುತ್ತದೆ. ಈ ವಿಚಾರ ವಾದಿಗೆ ತಿಳಿದಿದ್ದರೂ ಸಹ ಅಕ್ರಮ ಪಾಯಿದೆ ಹೊಂದುವ ದೃಷ್ಟಿಯಿಂದ ಸುಳ್ಳು ದಾವಾ ತಂದಿರುತ್ತಾಳೆ. ಆದುದರಿಂದ ವಾದಿಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ವಿಧವಾದ ಹಿಸ್ಸಾ ಹಕ್ಕಾಗಲೀ ವಗೈರೆಯಾಗಲೀ ಇರುವುದಿಲ್ಲ.

9. ಮುಂದುವರೆದು 3ನೇ ಪ್ರತಿವಾದಿ ತಿಳಿಸುವುದೇನೆಂದರೆ, 1ನೇ ಪ್ರತಿವಾದಿ ವೆಂಕಟೇಗೌಡರ 2ನೇ ಹೆಂಡತಿ ಜಯಮ್ಮಳು ಸಹ ಬದುಕಿದ್ದು ಅವಳನ್ನು 1ನೇ ಪ್ರತಿವಾದಿಯ ಕಾನೂನುಬದ್ಧ ವಾರಸುದಾರಳೆಂದು ದಾವಾದ ಕಡತದ ಮೇಲೆ ತರದೇ ಕೈ ಬಿಟ್ಟು ಕೇವಲ ವಾದಿಯು ಅಕ್ರಮ ಪಾಯಿದೆ ಹೊಂದುವ ದೃಷ್ಟಿಯಿಂದ 1(ಎ) ಯಿಂದ 1(ಎಫ್) ವರೆಗೆ ವಾರಸುದಾರರೆಂದು ಅರ್ಜಿ ಸಲ್ಲಿಸಿರುತ್ತಾರೆ. ಆದರೆ 1ನೇ ಪ್ರತಿವಾದಿಯ 2ನೇ ಹೆಂಡತಿ ಜಯಮ್ಮ ಕೋಂ ವೆಂಕಟೇಗೌಡ ಇವಳ ಪಾಲನೆ ಪೋಷಣೆಯನ್ನು ಪ್ರತಿವಾದಿಯರಾದ 1(ಎ) ಮತ್ತು 1(ಡಿ) ಯವರೇ ನಿರ್ವಹಿಸಿಕೊಂಡು ಹೋಗುತ್ತಿದ್ದು, ಅವರನ್ನು ಪಕ್ಷಗಾರರನ್ನಾಗಿ ಮಾಡದೇ ಸದರಿ ದಾವೆಯನ್ನು ಸಲ್ಲಿಸಿರುತ್ತಾರೆ. ಮೃತ 1ನೇ ಪ್ರತಿವಾದಿಯು ಅವನ ಜೀವಿತಾವಧಿಯಲ್ಲಿ ಆತನ ಸ್ವತ್ತುಗಳ ಮೇಲೆ ಯಾವುದೇ ಕಲಹ ವ್ಯಾಜ್ಯ ಉಂಟಾಗಬಾರದೆಂಬ ಉದ್ದೇಶದಿಂದ ಗೌಪ್ಯವಾಗಿ ದಿಃ 17-01-1985 ರಂದು ನೋಂದಾಯಿತ ಮರಣ ಶಾಸನ ಪತ್ರದ ಮೂಲಕ ಮೃತ 1ನೇ ಪ್ರತಿವಾದಿಯ 2ನೇ ಮಗಳು ಸಾವಿತ್ರಮ್ಮಳ ಮಕ್ಕಳಾದ 1ನೇ ಮೈನರ್ 17 ವರ್ಷದ ಚಂದ್ರೇಗೌಡ ಮತ್ತು

15 ವರ್ಷದ ಗೋವಿಂದೇಗೌಡ ಮೈನರ್ ಗಾರ್ಡಿಯನ್ ಇವರುಗಳ ಗಾರ್ಡಿಯನ್ ಅಜ್ಜಿ ಹೊಂಬಾಳಮ್ಮಳಿಗೂ ಸಹ ಮರಣ ಶಾಸನ ಪತ್ರವನ್ನು ಮೃತ 1ನೇ ಪ್ರತಿವಾದಿಯು ಗೌಪ್ಯವಾಗಿ ಬರೆಸಿಟ್ಟಿದ್ದು, ಈ ವಿಚಾರ 3ನೇ ಪ್ರತಿವಾದಿಗೂ ಸಹ ತಿಳಿದಿರುತ್ತದೆ. ಆದ್ದರಿಂದ ವಾದಿಯ ದಾವೆಯನ್ನು ಖರ್ಚಿನೊಂದಿಗೆ ವಜಾ ಮಾಡಬೇಕೆಂದು ಕೋರಿಕೊಂಡಿದ್ದಾರೆ.

10. ಈ ಮೇಲಿನ ವಾದ ಪ್ರತಿವಾದ ಪತ್ರಗಳ ಆಧಾರದ ಮೇಲೆ ನ್ಯಾಯಾಲಯವು ಈ ಕೆಳಗಿನ ವಿವಾದಾಂಶಗಳನ್ನು ರೂಪಿಸಲಾಗಿದೆಃ

## **-:: ISSUES::-**

1. Whether the plaintiff proves that the suit schedule properties are ancestral and joint family properties?

2. Whether the plaintiff further proves that she is entitled to get partition and separate possession of 1/3rd share in suit schedule properties?

3. Whether the suit is bad for non-joinder of necessary parties?

4. Whether the suit is properly valued and this court has jurisdiction to try the suit?

5. What order or decree?

## **-::ADDL ISSUES::-**

1. Whether the defendant Nos. 1(a) and (c) to (f) prove that, defendant

Nos.1(a) and (d) are the adopted sons of defendant No.1?

2. Whether the defendant Nos. 1(a) and (c) to (f) prove that, the defendant No.1 bequeath properties to the defendant No.1 (a) and (d) by executing will?

3. Whether the defendant Nos. 1(a) and (c) to (f) prove that, the suit properties are the self acquired properties of defendant No.1?

4. Whether the defendant No3 proves that, the suit properties are his self acquired properties as stated in the written statement?

11. ವಾದಿಯು ತನ್ನ ದಾವೆಯನ್ನು ರುಜುವಾತುಪಡಿಸಲು ತನ್ನನ್ನು ತಾನು ಪಿ.ಡಬ್ಲ್ಯೂ-1 ಎಂದು ನುಡಿಸಾಕ್ಷ್ಯ ಮಾಡಿಕೊಂಡಿರುತ್ತಾರೆ. ದಾಖಲೆಗಳನ್ನು ನಿಪಿ-1 ರಿಂದ 20 ಎಂದು ಗುರುತಿಸಿಕೊಂಡಿರುತ್ತಾರೆ ಮತ್ತು ವಾದಿಯು ತನ್ನ ಪರ ಸಾಕ್ಷಿ ವಿಚಾರಣೆ ಮುಕ್ತಾಯ ಮಾಡಿಕೊಂಡಿರುತ್ತಾರೆ.

12. ಪ್ರತಿವಾದಿಯು ತಮ್ಮ ಪ್ರತಿವಾದವನ್ನು ರುಜುವಾತುಪಡಿಸಲು ತನ್ನನ್ನು ತಾನು ಡಿ.ಡಬ್ಲ್ಯೂ-1 ಎಂದು, ತನ್ನ ಪರ ತಿಮ್ಮೇಗೌಡ ಎಂಬುವವರನ್ನು ಡಿ.ಡಬ್ಲ್ಯೂ-2 ಎಂದು, ಸಿ.ಎನ್. ಸುಬ್ಬಣ್ಣ ಎಂಬುವವರನ್ನು ಡಿ.ಡಬ್ಲ್ಯೂ-3 ಎಂದು, ಲಕ್ಷ್ಮೀನಾರಾಯಣ ಎಂಬುವವರನ್ನು ಡಿ.ಡಬ್ಲ್ಯೂ-4 ಎಂದು, ಶಶಿಧರ ಎಂ.ಹೆಚ್ ಎಂಬುವವರನ್ನು ಡಿ.ಡಬ್ಲ್ಯೂ-5 ಎಂದು ನುಡಿಸಾಕ್ಷ್ಯ ಮಾಡಿಕೊಂಡಿರುತ್ತಾರೆ. ದಾಖಲೆಗಳನ್ನು ನಿಡಿ-1 ರಿಂದ 8 ಎಂದು ಗುರುತಿಸಿಕೊಂಡಿರುತ್ತಾರೆ. ಮತ್ತು ಪ್ರತಿವಾದಿಯರು ತಮ್ಮ ಪರ ಸಾಕ್ಷಿ ವಿಚಾರಣೆ ಮುಕ್ತಾಯ ಮಾಡಿಕೊಂಡಿರುತ್ತಾರೆ.

13. ದಾವೆಯು ಡಿಕ್ರಿಯಾದ ನಂತರ ಪ್ರತಿವಾದಿಗಳಾದ 2(ಎ), (ಸಿ) ರಿಂದ 2(ಎಫ್) ಮತ್ತು 3 ರವರು ಡಿಕ್ರಿಯನ್ನು ಪ್ರಶ್ನಿಸಿ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ, ಚನ್ನರಾಯಪಟ್ಟಣದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯವು ವಿಚಾರಣೆಯಾದ ನಂತರ ಉಭಯ ಪಕ್ಷಗಾರರು ಅವಶ್ಯವಿದ್ದಲ್ಲಿ ತಿದ್ದುಪಡಿಗೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಮುಂದುವರೆದ ಸಾಕ್ಷ್ಯ ವಿಚಾರಣೆ ಮಾಡಿಕೊಳ್ಳಬಹದೆಂದು ಕಡತವನ್ನು ಈ ನ್ಯಾಯಾಲಯಕ್ಕೆ ಹಿಂತಿರುಗಿಸಲಾಗಿರುತ್ತದೆ. ನಂತರ ವಾದಿಯು ತಿದ್ದುಪಡಿಗೆ ಅರ್ಜಿಯನ್ನು ಸಲ್ಲಿಸಿ, ತಿದ್ದುಪಡಿ ಮಾಡಿಕೊಂಡಿದ್ದು, ನಂತರ ತಿದ್ದುಪಡಿ ವಾದ ಪತ್ರವನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿಗಳು ತಮ್ಮ ಪರವಾಗಿ ಹೆಚ್ಚುವರಿ ಪ್ರತಿವಾದ ಪತ್ರವನ್ನು ಕಾಲಾವಶಕಾಶ ನೀಡಿದರು ಸಲ್ಲಿಸಿರುವುದಿಲ್ಲ. ಆದುದರಿಂದ, ಪ್ರತಿವಾದಿಗಳ ಹೆಚ್ಚುವರಿ ಪ್ರತಿವಾದಪತ್ರ ಇಲ್ಲ ಎಂದು ಪರಿಗಣಿಸಿ, ವಾದಿಯ ಸಾಕ್ಷ್ಯ ವಿಚಾರಣೆಗೆ ಮುಂದೂಡಲಾಗಿದ್ದು, ಪ್ರಾಸಾ-1 ರವರು ಮುಂದುವರೆದ ಮುಖ್ಯ ಪ್ರಮಾಣ ಪತ್ರವನ್ನು ಸಲ್ಲಿಸಿ ತಮ್ಮ ಪರವಾಗಿ 11 ದಾಖಲೆಗಳನ್ನು ಹಾಜರುಪಡಿಸಿ ನಿಪಿ-21 ರಿಂದ 31 ಎಂದು ಗುರುತಿಸಿಕೊಂಡಿರುತ್ತಾರೆ. ಪುನಃ ಈ ನ್ಯಾಯಾಲಯಕ್ಕೆ ಡಿ.ಡಬ್ಲ್ಯೂ 1 ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣ ಪ್ರಮಾಣ ಪತ್ರ ಸಲ್ಲಿಸಿ, ತಮ್ಮ ಪರವಾಗಿ 2 ದಾಖಲೆಗಳನ್ನು ಹಾಜರುಪಡಿಸಿ, ನಿಪಿ 9 ಮತ್ತು 10 ಎಂದು ಗುರುತಿಸಿಕೊಂಡಿರುತ್ತಾರೆ. ನಂತರ ಪಾಟೀಸವಾಲಾದ ನಂತರ ವಾದಕ್ಕೆ ಮುಂದಾಡಲಾಗಿರುತ್ತದೆ.

14. ವಾದಿಯರ ಮತ್ತು ಪ್ರತಿವಾದಿಯರ ವಾದ-ವಿವಾದವನ್ನು ಆಲಿಸಲಾಯಿತು ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

15. ಮೇಲಿನ ವಿವಾದಾಂಶಗಳಿಗೆ ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ ನ್ಯಾಯಾಲಯದ ಉತ್ತರಗಳು ಈ ಕೆಳಗಿನಂತಿವೆ:

| | |
|---|---|
| 1ನೇ ವಿವಾದಾಂಶಃ | ಸಕಾರಾತ್ಮಕವಾಗಿ |
| 2ನೇ ವಿವಾದಾಂಶಃ | ಸಕಾರಾತ್ಮಕವಾಗಿ |
| 3ನೇ ವಿವಾದಾಂಶಃ | ನಕಾರಾತ್ಮಕವಾಗಿ |
| 4ನೇ ವಿವಾದಾಂಶಃ | ನಕಾರಾತ್ಮಕವಾಗಿ |
| ಹೆಚ್ಚುವರಿ ವಿವಾದಾಂಶಃ 1 | ನಕಾರಾತ್ಮಕವಾಗಿ |
| ಹೆಚ್ಚುವರಿ ವಿವಾದಾಂಶಃ 2 | ನಕಾರಾತ್ಮಕವಾಗಿ |
| ಹೆಚ್ಚುವರಿ ವಿವಾದಾಂಶಃ 3 | ನಕಾರಾತ್ಮಕವಾಗಿ |
| ಹೆಚ್ಚುವರಿ ವಿವಾದಾಂಶಃ 4 | ನಕಾರಾತ್ಮಕವಾಗಿ |
| 5ನೇ ವಿವಾದಾಂಶಃ | ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ |

## -ಕಾರಣಗಳುಃ-

16. **ವಿವಾದಾಂಶ ನಂ. 1ಮತ್ತು 2 ಹಾಗೂ ಹೆಚ್ಚುವರಿ ವಿವಾದಾಂಶ 1 ರಿಂದ 4:-** ಈ ಎಲ್ಲಾ ವಿವಾದಾಂಶಗಳ ಮೇಲಿನ ಚರ್ಚೆಯು ಒಂದಕ್ಕೊಂದು ಅವಲಂಬಿತವಾಗಿರುವುದರಿಂದ, ವಾಕ್ಯಗಳ ಪುನರಾವರ್ತನೆಯನ್ನು ತಡೆಯಲು ಅವುಗಳನ್ನು ಇಲ್ಲಿ ಒಟ್ಟಿಗೆ ಚರ್ಚೆಗೆ ತೆಗದುಕೊಳ್ಳಲಾಗಿದೆ.

17. 1 ನೇ ವಾದಿಯು ತನ್ನ ದಾವಾದ ಸಮರ್ಥನೆಗಾಗಿ ತನ್ನನ್ನು ತಾನು ಪಿ.ಡಬ್ಲ್ಯೂ-1 ಎಂದು ವಿಚಾರಣೆಗೊಳಪಡಿಸಿಕೊಂಡು ಐ.ಪಿ.ಸಿ ಕ್ರಮಾದೇಶ 18 ನಿಯಮ 4 ರ ಅಡಿಯಲ್ಲಿ ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ವಾದ ಪತ್ರದ ಎಲ್ಲಾ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

18. ಈ ಹಂತದಲ್ಲಿಯೇ ವಾದಿಯು ದಾಖಲಿಸಿರುವ ದಾಖಲೆಗಳ ಬಗ್ಗೆ ಚರ್ಚಿಸುವುದು ಅಗತ್ಯವಾಗಿರುತ್ತದೆ. ನಿಪಿ-1 ಪಹಣಿಯಾಗಿದ್ದು, ದಾವಾ ಐಟಂ ನಂ. 7 ಪ್ರತಿವಾದಿ 2(ಡಿ) ರವರ ಹೆಸರಿಗೆ ಎಂ.ಆರ್. 26/2004-05 ರಂತೆ

ಖಾತೆಯಾಗಿರುತ್ತದೆ. ನಿಪಿ-2 ಪಹಣಿಯಾಗಿದ್ದು ದಾವಾ ಐಟಂ ನಂ. 15, ಸರ್ವೆ.ನಂ. 9/3, 1ನೇ ಪ್ರತಿವಾದಿಯ ಹೆಸರಿಗೆ 1 ಎಕರೆ 6 ಗುಂಟೆ ಸ್ವತ್ತು ಖಾತೆಯಾಗಿರುವುದು ಕಂಡು ಬರುತ್ತದೆ. ನಿಪಿ-3 ಪಹಣಿಯಾಗಿದ್ದು, ದಾವಾ ಐಟಂ ನಂ. 1ರಲ್ಲಿ 7 ಗುಂಟೆ ಸ್ವತ್ತು 1ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ನಿಪಿ-4 ಪಹಣಿಯಾಗಿದ್ದು, ದಾವಾ ಐಟಂ ನಂ. 3 ರಲ್ಲಿ 4 ಗುಂಟೆ ಸ್ವತ್ತು 1ನೇ ಪ್ರತಿವಾದಿಯ ಹೆಸರಿನಲ್ಲಿರುವುದು ಕಂಡು ಬರುತ್ತದೆ. ನಿಪಿ-5 ಪಹಣಿಯಾಗಿದ್ದು, ದಾವಾ ಐಟಂ 14 ಸರ್ವೆ. ನಂ. 29/3 ರಲ್ಲಿ 1 ನೇ ಪ್ರತಿವಾದಿಯ ಹೆಸರಿನಲ್ಲಿ 5 ಗುಂಟೆ ಸ್ವತ್ತು ಇರುವುದು ಕಂಡು ಬರುತ್ತದೆ. ನಿಪಿ-6 ಪಹಣಿಯಾಗಿದ್ದು, ದಾವಾ ಐಟಂ ನಂ. 10, 1ನೇ ಪ್ರತಿವಾದಿಯ ಹೆಸರಿನಲ್ಲಿರುವುದು ಕಂಡು ಬರುತ್ತದೆ. ನಿಪಿ-7ಮತ್ತು 8 ಪಹಣಿಯಾಗಿದ್ದು, ದಾವಾ ಐಟಂ ನಂ. 11, ಸರ್ವೆ.ನಂ. 67/1, 1ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ನಿಪಿ-9 ಪಹಣಿಯಾಗಿದ್ದು, ಸರ್ವೆ. ನಂ. 83/1 ರಲ್ಲಿ 1 ಎಕರೆ ಸ್ವತ್ತು 1ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ನಿಪಿ-10 ದಾವಾ ಐಟಂ ನಂ. 6 ಪಹಣಿಯಾಗಿದ್ದು ಸರ್ವೆ.ನಂ. 84/1 ರಲ್ಲಿ 19 ಗುಂಟೆ ಪ್ರತಿವಾದಿ 2(ಡಿ) ರವರ ಹೆಸರಿನಲ್ಲಿ ಖಾತೆಯಲ್ಲಿರುವುದು ಕಂಡು ಬರುತ್ತದೆ.

19. ನಿಪಿ-11 ಐಟಂ ನಂ. 4 ರಲ್ಲಿ ಸರ್ವೆ. ನಂ.84/3 ರಲ್ಲಿ 1ನೇ ಪ್ರತಿವಾದಿಯ ಹೆಸರಿಗೆ 32.08 ಗುಂಟೆ ಸ್ವತ್ತು ಇರುವುದು ಕಂಡು ಬರುತ್ತದೆ. ನಿಪಿ-12 ಪಹಣಿಯಾಗಿದ್ದು, ದಾವಾ ಐಟಂ ನಂ. 2 ಸರ್ವೆ. ನಂ. 85/3 ರಲ್ಲಿ 1ನೇ ಪ್ರತಿವಾದಿಯ ಹೆಸರಿನಲ್ಲಿರುವುದು ಕಂಡು ಬರುತ್ತದೆ. ನಿಪಿ-13 ಪಹಣಿಯಾಗಿದ್ದು, ಸರ್ವೆ.ನಂ. 123/2 ರಲ್ಲಿ 1ನೇ ಪ್ರತಿವಾದಿಯ ಹೆಸರಿಗೆ 22.08 ಗುಂಟೆ ಸ್ವತ್ತು ಇರುವುದು ಕಂಡು ಬರುತ್ತದೆ. ನಿಪಿ-14 ಸರ್ವೆ. ನಂ. 125/5 ರಲ್ಲಿ 1ನೇ ಪ್ರತಿವಾದಿಯ ಹೆಸರಿನಲ್ಲಿ 29 ಗುಂಟೆ ಸ್ವತ್ತು ಇರುವುದು ಕಂಡು ಬರುತ್ತದೆ. ನಿಪಿ-15 ದಾವಾ ಐಟಂ ನಂ. 5 ಸರ್ವೆ.ನಂ. 17/17, 1ನೇ ಪ್ರತಿವಾದಿಯ ಹೆಸರಿಲ್ಲಿರುತ್ತದೆ. ನಿಪಿ-16 ಪಹಣಿಯಾಗಿದ್ದು, ದಾವಾ ಐಟಂ ನಂ. 8 ಸರ್ವೆ.ನಂ. 83/3 ರಲ್ಲಿ 1ನೇ ಪ್ರತಿವಾದಿಯ ಹೆಸರಿಗೆ 21 ಗುಂಟೆ ಸ್ವತ್ತು ಇರುವುದು ಕಂಡು ಬರುತ್ತದೆ. ನಿಪಿ-17

ಅನುಬಂಧ-1 ಆಗಿದ್ದು ದಾವಾ ಐಟಂ ನಂ. 20, 1ನೇ ಪ್ರತಿವಾದಿಯ ಹೆಸರಿನಲ್ಲಿರುವುದು ಕಂಡು ಬರುತ್ತದೆ. ನಿಪಿ-18 ಅನುಬಂಧ-1 ಆಗಿದ್ದು ದಾವಾ ಐಟಂ ನಂ. 19, 1ನೇ ಪ್ರತಿವಾದಿಯ ಹೆಸರಿನಲ್ಲಿರುವುದು ಕಂಡು ಬರುತ್ತದೆ. ನಿಪಿ-19 ಪಹಣಿಯಾಗಿದ್ದು ದಾವಾ ಐಟಂ ನಂ. 12, 1ನೇ ಪ್ರತಿವಾದಿಯ ಹೆಸರಿನಲ್ಲಿರುವುದು ಕಂಡು ಬರುತ್ತದೆ. ನಿಪಿ-20 ಪಹಣಿಯಾಗಿದ್ದು, ದಾವಾ ಐಟಂ ನಂ.9, 1 ನೇ ಪ್ರತಿವಾದಿಯ ಹೆಸರಿನಲ್ಲಿರುವುದು ಕಂಡು ಬರುತ್ತದೆ. ನಿಪಿ-21, ಚನ್ನರಾಯಪಟ್ಟಣ ತಾಲ್ಲೂಕಿನ ಕಸಬಾ ಹೋಬಳಿಯ ಮಾರೇನಹಳ್ಳಿ ಗ್ರಾಮದ ಸರ್ವೆ ನಂ.25/7 ರ ಪಹಣಿಯಾಗಿದ್ದು, ವೆಂಕಟೇಗೌಡ ಬಿನ್ ರಂಗೇಗೌಡ ರವರಿಗೆ 4 ಗುಂಟೆ MR-17/2007-08 ರಲ್ಲಿ ವಿಭಜನೆಯ ಮೂಲಕ ಬಂದಿದ್ದು, ಸದರಿಯವರು 2025-26 ರಲ್ಲಿ ಸ್ವಾಧೀನ ಇರುವುದಾಗಿ ನಮೂದಾಗಿರುತ್ತದೆ. ನಿ.ಪಿ-22, ಚನ್ನರಾಯಪಟ್ಟಣ ತಾಲ್ಲೂಕಿನ ಕಸಬಾ ಹೋಬಳಿಯ ಮಾರೇನಹಳ್ಳಿ ಗ್ರಾಮದ ಸರ್ವೆ ನಂ.84/3 ರ ಪಹಣಿಯಾಗಿದ್ದು, ವೆಂಕಟೇಗೌಡ ಬಿನ್ ರಂಗೇಗೌಡ ರವರಿಗೆ 32.08.00 ಗುಂಟೆ MR-17/2007-08 ರಲ್ಲಿ ವಿಭಜನೆಯ ಮೂಲಕ ಬಂದಿದ್ದು, ಸದರಿಯವರು 2025-26 ರಲ್ಲಿ ಸ್ವಾಧೀನ ಇರುವುದಾಗಿ ನಮೂದಾಗಿರುತ್ತದೆ. ನಿ.ಪಿ-23, ಚನ್ನರಾಯಪಟ್ಟಣ ತಾಲ್ಲೂಕಿನ ಕಸಬಾ ಹೋಬಳಿಯ ಮಾರೇನಹಳ್ಳಿ ಗ್ರಾಮದ ಸರ್ವೆ ನಂ.17/17 ರ ಪಹಣಿಯಾಗಿದ್ದು, ವೆಂಕಟೇಗೌಡ ಬಿನ್ ರಂಗೇಗೌಡ ರವರಿಗೆ 32.08.00 ಗುಂಟೆ MRH 39/2014-15 ರಲ್ಲಿ ವಿಭಜನೆಯ ಮೂಲಕ ಬಂದಿದ್ದು, ವೆಂಕಟೇಗೌಡ, ರಂಗೇಗೌಡ ಬಿನ್ ರಂಗೇಗೌಡ, ಹುಚ್ಚಮ್ಮ ರಂಗೇಗೌಡ, ವೆಂಕಟೇಗೌಡ, ಗೋವಿಂದೇಗೌಡ, ರಂಗೇಗೌಡರವರು ಸ್ವಾಧೀನ ಇರುವುದಾಗಿ ನಮೂದು ಆಗಿರುತ್ತದೆ. ನಿ.ಪಿ-24, ಚನ್ನರಾಯಪಟ್ಟಣ ತಾಲ್ಲೂಕಿನ ಕಸಬಾ ಹೋಬಳಿಯ ಮಾರೇನಹಳ್ಳಿ ಗ್ರಾಮದ ಸರ್ವೆ ನಂ.83/3 ರ ಪಹಣಿಯಾಗಿದ್ದು, ವೆಂಕಟೇಗೌಡ ಬಿನ್ ಲೇಟ್ ರಂಗೇಗೌಡ ರವರಿಗೆ 21 ಗುಂಟೆ MRH 39/2014-15 ರಲ್ಲಿ ವಿಭಜನೆಯ ಮೂಲಕ ಬಂದಿದ್ದು, ವೆಂಕಟೇಗೌಡ, ರಂಗೇಗೌಡ ಬಿನ್ ರಂಗೇಗೌಡ, ಹುಚ್ಚಮ್ಮ ರಂಗೇಗೌಡ, ವೆಂಕಟೇಗೌಡ, ಗೋವಿಂದೇಗೌಡ, ರಂಗೇಗೌಡರವರು ಸ್ವಾಧೀನ ಇರುವುದಾಗಿ

ನಮೂದು ಆಗಿರುತ್ತದೆ. ನಿ.ಪಿ-25, ಚನ್ನರಾಯಪಟ್ಟಣ ತಾಲ್ಲೂಕಿನ ಕಸಬಾ ಹೋಬಳಿಯ ಮಾರೇನಹಳ್ಳಿ ಗ್ರಾಮದ ಸರ್ವೆ ನಂ.65/2 ರ ಪಹಣಿಯಾಗಿದ್ದು, ವೆಂಕಟೇಗೌಡ ಬಿನ್ ಲೇಟ್ ರಂಗೇಗೌಡ ರವರಿಗೆ 1 ಎಕರೆ 11 ಗುಂಟೆ MRH 27/2007-08 ರಲ್ಲಿ ವಿಭಜನೆಯ ಮೂಲಕ ಬಂದಿದ್ದುಸದರಿಯವರೇ ಸ್ವಾಧೀನ ಇರುವುದಾಗಿ ನಮೂದು ಆಗಿರುತ್ತದೆ. ನಿ.ಪಿ-26, ಚನ್ನರಾಯಪಟ್ಟಣ ತಾಲ್ಲೂಕಿನ ಕಸಬಾ ಹೋಬಳಿಯ ಮಾರೇನಹಳ್ಳಿ ಗ್ರಾಮದ ಸರ್ವೆ ನಂ.66/4 ರ ಪಹಣಿಯಾಗಿದ್ದು, ವೆಂಕಟೇಗೌಡ ಬಿನ್ ಲೇಟ್ ರಂಗೇಗೌಡ ರವರಿಗೆ 18 ಗುಂಟೆ MRH 39/2014-15 ರಲ್ಲಿ ವಿಭಜನೆಯ ಮೂಲಕ ಬಂದಿದ್ದು, ವೆಂಕಟೇಗೌಡ, ರಂಗೇಗೌಡ ಬಿನ್ ರಂಗೇಗೌಡ, ಹುಚ್ಚಮ್ಮ ರಂಗೇಗೌಡ , ವೆಂಕಟೇಗೌಡ, ಗೋವಿಂದೇಗೌಡ, ರಂಗೇಗೌಡರವರು ಸ್ವಾಧೀನ ಇರುವುದಾಗಿ ನಮೂದು ಆಗಿರುತ್ತದೆ. ನಿ.ಪಿ-27, ಚನ್ನರಾಯಪಟ್ಟಣ ತಾಲ್ಲೂಕಿನ ಕಸಬಾ ಹೋಬಳಿಯ ಮಾರೇನಹಳ್ಳಿ ಗ್ರಾಮದ ಸರ್ವೆ ನಂ.9/3 ರ ಪಹಣಿಯಾಗಿದ್ದು, ವೆಂಕಟೇಗೌಡ ಬಿನ್ ಲೇಟ್ ರಂಗೇಗೌಡ ರವರಿಗೆ 18 ಗುಂಟೆ MRH 21/1998-99, ವೆಂಕಟೇಗೌಡ ಬಿನ್ ಲೇಟ್ ರಂಗೇಗೌಡ ರವರಿಗೆ 18 ಗುಂಟೆ MRH 29/2003-08, ವೆಂಕಟೇಗೌಡ ಬಿನ್ ಲೇಟ್ ರಂಗೇಗೌಡ ರವರಿಗೆ 10 ಗುಂಟೆ MRH 30/2003-04, ರಲ್ಲಿ ಕ್ರಯದ ಮೂಲಕ ಬಂದಿದ್ದು, ಗೋವಿಂದೇಗೌಡ ಮಂಜಪ್ಪ ನಾಗರಾಜು ಬಿನ್ ಹೊನ್ನೇಗೌಡ ಉಃ ಮರಿಯ ಪ್ಪ ರವರಿಗೆ 20 ಗುಂಟೆ MRH 23/2017-18 ಪೌತಿ ಖಾತೆಯ ಮೂಲಕ ಬಂದಿದ್ದು, ವೆಂಕಟೇಗೌಡ ಬಿನ್ ರಂಗೇಗೌಡ, ವೆಂಕಟೇಗೌಡ ಬಿನ್ ರಂಗೇಗೌಡ, ಗೋವಿಂದೇಗೌಡ ಬಿನ್ ಮಂಜಪ್ಪ, ನಾಗರಾಜು ಬಿನ್ ಹೊನ್ನೇಗೌಡ ಉಃಮರಿಯಪ್ಪ ವೆಂಕಟೇಗೌಡ ಸಿ.ವಿ ಗುಂಡಪ್ಪ, ಲಕ್ಷ್ಮಮ್ಮ ಸ್ವಾಧೀನ ಇರುವುದಾಗಿ ನಮೂದು ಆಗಿರುತ್ತದೆ. ನಿ.ಪಿ-29, ಚನ್ನರಾಯಪಟ್ಟಣ ತಾಲ್ಲೂಕಿನ ಕಸಬಾ ಹೋಬಳಿಯ ಮಾರೇನಹಳ್ಳಿ ಗ್ರಾಮದ ಸರ್ವೆ ನಂ.83/1 ರ ಪಹಣಿಯಾಗಿದ್ದು, ವೆಂಕಟೇಗೌಡ ಬಿನ್ ಲೇಟ್ ರಂಗೇಗೌಡ ರವರಿಗೆ 1 ಎಕರೆ ಗುಂಟೆ MR 17/2007-08 ರಲ್ಲಿ ವಿಭಜನೆಯ ಮೂಲಕ ಬಂದಿದ್ದು, ವೆಂಕಟೇಗೌಡ ಬಿನ್ ರಂಗೇಗೌಡ, ವೆಂಕಟೇಗೌಡ, ರಂಗೇಗೌಡ, ರಂಗೇಗೌಡ ರಂಗೇಗೌಡ, ಹುಚ್ಚಮ್ಮ

ರಂಗೇಗೌಡ, ವೆಂಕಟೇಗೌಡ, ಗೋವಿಂದೇಗೌಡ, ರಂಗೇಗೌಡರವರು ಸ್ವಾಧೀನ ಇರುವುದಾಗಿ ನಮೂದು ಆಗಿರುತ್ತದೆ. ನಿ.ಪಿ-30, ಚನ್ನರಾಯಪಟ್ಟಣ ತಾಲ್ಲೂಕಿನ ಕಸಬಾ ಹೋಬಳಿಯ ಮಾರೇನಹಳ್ಳಿ ಗ್ರಾಮದ ಸರ್ವೆ ನಂ.29/3 ರ ಪಹಣಿಯಾಗಿದ್ದು, ವೆಂಕಟೇಗೌಡ ಬಿನ್ ಲೇಟ್ ರಂಗೇಗೌಡ ರವರಿಗೆ 0.05.00 MR 17/2007-08 ರಲ್ಲಿ ವಿಭಜನೆಯ ಮೂಲಕ ಬಂದಿದ್ದು, ವೆಂಕಟೇಗೌಡ ಬಿನ್ ರಂಗೇಗೌಡ, ವೆಂಕಟೇಗೌಡ, ರಂಗೇಗೌಡ, ರಂಗೇಗೌಡ ರಂಗೇಗೌಡ , ಹುಚ್ಚಮ್ಮ ರಂಗೇಗೌಡ, ವೆಂಕಟೇಗೌಡ, ಗೋವಿಂದೇಗೌಡ, ರಂಗೇಗೌಡರವರು ಸ್ವಾಧೀನ ಇರುವುದಾಗಿ ನಮೂದು ಆಗಿರುತ್ತದೆ. ನಿ.ಪಿ-31, ಚನ್ನರಾಯಪಟ್ಟಣ ತಾಲ್ಲೂಕಿನ ಕಸಬಾ ಹೋಬಳಿಯ ಮಾರೇನಹಳ್ಳಿ ಗ್ರಾಮದ ಸರ್ವೆ ನಂ.123/2 ರ ಪಹಣಿಯಾಗಿದ್ದು, ವೆಂಕಟೇಗೌಡ ಬಿನ್ ಲೇಟ್ ರಂಗೇಗೌಡ ರವರಿಗೆ 0.22.08.00 MR 5/1993-94 ರಲ್ಲಿ ವಿಭಜನೆಯ ಮೂಲಕ ಬಂದಿದ್ದು, ವೆಂಕಟೇಗೌಡ ಬಿನ್ ರಂಗೇಗೌಡ, ವೆಂಕಟಪ್ಪ ರಂಗೇಗೌಡ ರಂಗೇಗೌಡ, ರಂಗೇಗೌಡ ರಂಗೇಗೌಡ, ಹುಚ್ಚಮ್ಮ ರಂಗೇಗೌಡ, ವೆಂಕಟೇಗೌಡ ರಂಗೇಗೌಡ, ಗೋವಿಂದೇಗೌಡ ರಂಗೇಗೌಡರವರು ಸ್ವಾಧೀನ ಇರುವುದಾಗಿ ನಮೂದು ಆಗಿರುತ್ತದೆ. ನಂತರ ಪಾಟಿ ಸವಾಲು ಮಾಡಿದ್ದು ನಂತರ ಪ್ರತಿವಾದಿಗಳ ಸಾಕ್ಷ್ಯ ವಿಚಾರಣೆಗೆ ಮುಂದೂಡಲಾಗಿರುತ್ತದೆ.

20. ವಾದಿಯು ಹಾಜರುಪಡಿಸಿರುವ ನಿಪಿ-1 ರಿಂದ 31 ದಾಖಲೆಗಳನ್ನು ಪರಿಶೀಲಿಸಲಾಗಿ ದಾವಾ ಐಟಂ ನಂ. 1ರಿಂದ 5, 8 ರಿಂದ 12, 14, 15, 17 ರಿಂದ 20 ಸ್ವತ್ತುಗಳು ವಾದಿಯ ತಂದೆ 1ನೇ ಪ್ರತಿವಾದಿಯ ಹೆಸರಿನಲ್ಲಿರುವುದು ಕಂಡು ಬರುತ್ತದೆ. ದಾವಾ ಐಟಂ ನಂ. 6, 7 ಪ್ರತಿವಾದಿ 2 (ಡಿ) ರವರ ಹೆಸರಿನಲ್ಲಿರುವುದು ಕಂಡು ಬರುತ್ತದೆ. ಸದರಿ ದಾವಾಸ್ವತ್ತುಗಳು 1 ನೇ ಪ್ರತಿವಾದಿಗೆ ವಿಭಾಗದ ಮೂಲಕ ಬಂದಿದ್ದು, ಪಿತ್ರಾರ್ಜಿತ ಸ್ವತ್ತುಗಳಾಗಿರುತ್ತವೆ. ಅದೇರೀತಿ, ಐಟಂ 6 ಮತ್ತು 7 ಸ್ವತ್ತುಗಳು ಕಂದಾಯ ದಾಖಲೆಗಳು ಪ್ರತಿವಾದಿ 2 (d) ರವರ ಹೆಸರಿನಲ್ಲಿದ್ದು, ಸದರಿ ಸ್ವತ್ತುಗಳು ಸಹ ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಮತ್ತು ಪಿತ್ರಾರ್ಜಿತ ಸ್ವತ್ತುಗಳಾಗಿರುತ್ತವೆ.

21. 1ನೇ ಪ್ರತಿವಾದಿಯು ವಾದಿಯ ತಂದೆಯಾಗಿದ್ದು, 2ನೇ ಪ್ರತಿವಾದಿ ಹೆಂಡತಿ ಸಾವಿತ್ರಮ್ಮ, 1ನೇ ಪ್ರತಿವಾದಿ ಮತ್ತು ಹೊಂಬಾಳಮ್ಮ ರವರ 2ನೇ ಮಗಳಾಗಿರುತ್ತಾಳೆ. ದಾವಾ ಸ್ವತ್ತುಗಳು 1ನೇ ಪ್ರತಿವಾದಿಯ ಪಿತ್ರಾರ್ಜಿತ ಸ್ವತ್ತುಗಳಾಗಿರುತ್ತದೆ. 1ನೇ ಪ್ರತಿವಾದಿಗೆ ಗಂಡು ಸಂತಾನವಿಲ್ಲದ ಕಾರಣ ದಾವಾ ಸ್ವತ್ತುಗಳನ್ನು ಇಬ್ಬರು ಹೆಣ್ಣು ಮಕ್ಕಳಿಗೆ ಪಾಲು ಮಾಡಿಕೊಡಬೇಕೆಂದು ತೀರ್ಮಾನಿಸಿದ್ದರು. 1ನೇ ಪ್ರತಿವಾದಿಯು 2ನೇ ಪ್ರತಿವಾದಿಯ ಮಕ್ಕಳುಗಳ ಹೆಸರಿಗೆ ಮರಣ ಶಾಸನವನ್ನು ಬರೆದುಕೊಟ್ಟು, ವಾದಿಗೆ ಯಾವುದೇ ಆಸ್ತಿಗಳನ್ನು ಹಿಸ್ಸೆ ನೀಡಿರುವುದಿಲ್ಲ. ಆದ್ದರಿಂದ ಸದರಿ ದಾವೆಯನ್ನು ಸಲ್ಲಿಸಿರುತ್ತಾರೆ. ಈ ಹಂತದಲ್ಲಿ ನಿಡಿ-1 ರ ಬಗ್ಗೆ ಚರ್ಚಿಸುವುದು ಅವಶ್ಯಕವಾಗಿರುತ್ತದೆ. ನಿ.ಡಿ-1 ದಿನಾಂಕಃ17.01.1985 ರಲ್ಲಿ 1 ನೇ ಪ್ರತಿವಾದಿಯು ವಾದಿಯ ಸಹೋದರಿಯಾದ ಸಾವಿತ್ರಮ್ಮರವರ ಮಕ್ಕಳಾದ ಅಂದರೆ 2 ನೇ ಪ್ರತಿವಾದಿಯ ಮೈನರ್ ಮಕ್ಕಳಾದ ಚಂದ್ರೇಗೌಡ ಮತ್ತು ಗೋವಿಂದೇಗೌಡ 2 (a) (d) ಪ್ರತಿವಾದಿರವರ ಪರವಾಗಿ ಅವರ ಅಜ್ಜಿ ಹೋಬಾಳಮ್ಮ ರವರ ಹೆಸರಿಗೆ ದಾವಾಸ್ವತ್ತು ಐಟಂ. 1, 2 ,3, 6, 7, 8, 9, 13, 14, 17, 19 ಮತ್ತು 20 ಗಳನ್ನು ವಿಲ್ ಮಾಡಿದ್ದು, ಸದರಿ ಷಡ್ಯೂಲ್ ಸ್ವತ್ತುಗಳ ಸ್ವಾಧೀನ ಮತ್ತು ಹ ಕ್ಕು ಬಾಧ್ಯತೆಗಳೆಲ್ಲವೂ ಸಹ ತನ್ನ ಮತ್ತು ತನ್ನ ಹೆಂಡತಿ 1 ನೇ ಹೊಂಬಾಳಮ್ಮ, 2 ನೇ ಹೆಂಡತಿ ಜಯಮ್ಮ ರವರುಗಳ ಮರಣ ನಂತರ ಜಾರಿಗೆ ಬರತಕ್ಕದ್ದು ಎಂದು ಸ್ಪಷ್ಟವಾಗಿ ನಮೂದಾಗಿರುತ್ತದೆ. ಆದಕಾರಣ, ವಿಲ್ ನ ಕರ್ತರಾದ 1 ನೇ ಪ್ರತಿವಾದಿಯು ಇನ್ನೂ ಜೀವಂತ ಇರುವ ಕಾರಣ ಸದರಿ ವಿಲ್ ಗೆ ಯಾವುದೇ ಕಾನೂನು ಮಾನ್ಯತೆಯೂ ಇರುವುದಿಲ್ಲ ಮತ್ತು ಸದರಿ ವಿಲ್ ನ ಆಧಾರದ ಮೇಲೆ 2 (a) (d) ಪ್ರತಿವಾದಿಗಳಿಗೆ ಹಾಗೂ 1 ನೇ ಪ್ರತಿವಾದಿಯ ಹೆಂಡತಿಯರಿಗೆ ಯಾವುದೇ ಕಾನೂನು ಬದ್ಧ ಹಕ್ಕು ಪ್ರಾಪ್ತವಾಗಿರುವುದಿಲ್ಲ. ಆದುದರಿಂದ, ನಿಡಿ 1 ರ ಬಗ್ಗೆ ಹೆಚ್ಚಿನ ಚರ್ಚೆ ಅನಾವಶ್ಯಕ. ನಿಡಿ 2 ಮತ್ತು 3 ಪ್ರತಿವಾದಿಗಳಾದ 2 (a) (d) ರವರ ಲಗ್ನ ಪತ್ರಿಕೆ ಆಗಿರುತ್ತದೆ. ನಿಡಿ 4, 5 ಮತ್ತು 6 ಆಧಾರ ಗುರುತಿನ ಚೀಟಿ ಮತ್ತು ಚುನಾವಣಾ ಗುರುತಿನ ಚೀಟಿಗಳಾಗಿರುತ್ತವೆ. ನಿಡಿ 8 ಷೇರು ಸರ್ಟಿಫಿಕೇಟ್

ಆಗಿರುತ್ತದೆ. ನಿಡಿ 9 ಉಪನೊಂದಣಾಧಿಕಾರಿ ನೀಡಿರುವ ಧೃಡೀಕೃತ ದಾಖಲೆಯಾಗಿರುತ್ತದೆ. ನಿಡಿ-10 ಕಾಳೇನಹಳ್ಳಿ ಗ್ರಾಮ ಪಂಚಾಯಿತಿಯವರು ನೀಡಿರುವ ಧೃಡೀಕರಣ ಪತ್ರವಾಗಿರುತ್ತದೆ.

22. ಪ್ರತಿವಾದಿ 1 (ಎ) ರಿಂದ (ಎಫ್) ರವರು ಪ್ರತಿವಾದಿ 1(ಎ) ಮತ್ತು (ಡಿ) ರವರನ್ನು 1ನೇ ಪ್ರತಿವಾದಿ ದತ್ತು ತೆಗೆದುಕೊಂಡಿರುತ್ತಾರೆ. ಅವರ ಶಾಲಾ ದಾಖಲೆಗಳಲ್ಲೂ ಸಹ 1ನೇ ಪ್ರತಿವಾದಿಯ ಮಕ್ಕಳುಗಳೆಂದು ನಮೂದಾಗಿರುತ್ತದೆ ಎಂದು ತಮ್ಮ ಲಿಖಿತ ಹೇಳಿಕೆಯಲ್ಲಿ ತಿಳಿಸಿರುತ್ತಾರೆ. ಪ್ರತಿವಾದಿ 1(ಎ) ಮತ್ತು 1(ಡಿ) ರವರು 1ನೇ ಪ್ರತಿವಾದಿಯ ದತ್ತು ಮಕ್ಕಳು ಎಂದು ತೋರಿಸಲು ಯಾವುದೇ ಶಾಲಾ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. 1ನೇ ಪ್ರತಿವಾದಿ ಮತ್ತು ಹೊಂಬಾಳಮ್ಮ ಪ್ರತಿವಾದಿ 1(ಎ) ಮತ್ತು (ಡಿ) ರವರನ್ನು ದತ್ತು ತೆಗೆದುಕೊಂಡಿರುವ ಬಗ್ಗೆ ದತ್ತು ನೀಡಿದ ತಂದೆ, ತಾಯಿಯಾಗಲೀ ಅಥವಾ ದತ್ತು ಪಡೆದ ತಂದೆ ತಾಯಿಯರ ಯಾವುದೇ ನುಡಿಸಾಕ್ಷ್ಯ ಮಾಡಿಕೊಂಡಿರುವುದಿಲ್ಲ, ದತ್ತಕ ಪಡೆಯುವ ಸಂಧರ್ಭದಲ್ಲಿ ಹಾಜರಿದ್ದ ಇತರೆ ಸಾಕ್ಷಿದಾರರ ನುಡಿಸಾಕ್ಷ್ಯ ಮಾಡಿಕೊಂಡಿರುವುದಿಲ್ಲ ಮತ್ತು ಸಂಬಂಧಪಟ್ಟ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

23. 2 ಎ ಪ್ರತಿವಾದಿಯು ತನ್ನ ದಾವಾದ ಸಮರ್ಥನೆಗಾಗಿ ತನ್ನನ್ನು ತಾನು ಡಿ.ಡಬ್ಲ್ಯೂ-1 ಎಂದು ವಿಚಾರಣೆಗೊಳಪಡಿಸಿಕೊಂಡು ಐ.ಪಿ.ಸಿ ಕ್ರಮಾದೇಶ 18 ನಿಯಮ 4 ರ ಅಡಿಯಲ್ಲಿ ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ವಾದ ಪತ್ರದ ಎಲ್ಲಾ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

24. ಈ ಹಂತದಲ್ಲಿಯೇ ವಾದಿಯು ದಾಖಲಿಸಿರುವ ದಾಖಲೆಗಳ ಬಗ್ಗೆ ಚರ್ಚಿಸುವುದು ಅಗತ್ಯವಾಗಿರುತ್ತದೆ. ಡಿ.ಡಬ್ಲ್ಯೂ-1 ರವರು ಹಾಜರುಪಡಿಸಿರುವ ನಿಡಿ-1 ದಿನಾಂಕಃ 17.01.1985 ರ ಮರಣ ಶಾಸನ ಪತ್ರವಾಗಿದ್ದು, ನಿಡಿ-2 ದಿನಾಂಕಃ 19.06.1988 ರ ಲಗ್ನ ಪತ್ರಿಕೆಯಾಗಿದ್ದು,

ನಿಡಿ-3 ದಿನಾಂಕಃ 19.05.1996 ರ ಲಗ್ನ ಪತ್ರಿಕೆಯಾಗಿರುತ್ತದೆ. ನಿಡಿ-4 ಆಧಾರ ಕಾರ್ಡ್‌ಆಗಿದ್ದು ಪ್ರತಿವಾದಿ 1(ಎ) ಜನ್ಮ ದಿನಾಂಕ 01-01-1968 ಎಂದು ನಮೂದಾಗಿದ್ದು, ನಿಡಿ-4ನ್ನು ದಿಃ 09-04-2018 ರಂದು ಪಡೆದಿರುವುದು ಕಂಡು ಬರುತ್ತದೆ. ನಿಡಿ-5 ಪ್ರತಿವಾದಿ 1(ಡಿ) ರವರ ಆಧಾರ ಕಾರ್ಡ್‌ಆಗಿದ್ದು ದಿಃ 29-12-2016 ರಂದು ಪಡೆದಿರುವುದು ಕಂಡು ಬರುತ್ತದೆ. ನಿಡಿ-6 ಪ್ರತಿವಾದಿ 1(ಎ) ರವರ ಚುನಾವಣಾ ಗುರುತಿನ ಚೀಟಿಯಾಗಿದ್ದು, ಅವರ ಜನ್ಮ ದಿನಾಂಕ 1967 ಎಂದು ನಮೂದಾಗಿದ್ದು ಸದರಿ ದಾಖಲೆಯನ್ನು 27-12-2010 ರಂದು ಪಡೆದಿರುವುದು ಕಂಡು ಬರುತ್ತದೆ. ನಿಡಿ-7 ಪ್ರತಿವಾದಿ 1(ಡಿ) ರವರ ಚುನಾವಣಾ ಗುರುತಿನ ಚೀಟಿಯಾಗಿದ್ದು ಇವರ ಜನ್ಮ ದಿನಾಂಕ 1973 ಎಂದು ನಮೂದಾಗಿದ್ದು ಸದರಿ ದಾಖಲೆಯನ್ನು 01-10-2008 ರಂದು ಪಡೆದಿರುವುದು ಕಂಡು ಬರುತ್ತದೆ. ನಿಡಿ-6ನ್ನು ಪ್ರತಿವಾದಿ 1(ಎ) ರವರು ತಮ್ಮ 42 ವಯಸ್ಸಿನ ನಂತರ ಹಾಗೂ ಪ್ರತಿವಾದಿ 1(ಡಿ) ರವರು ತಮ್ಮ 34 ವಯಸ್ಸಿನ ನಂತರ ನಿಡಿ- 6 ಮತ್ತು 7 ದಾಖಲೆಗಳನ್ನು ಪಡೆದಿರುವುದು ಸಂಶಯಾಸ್ಪದವಾಗಿದೆ. ಡಿ.ಡಬ್ಲ್ಯೂ-1 ರವರು ಹಾಜರು ಪಡಿಸಿರುವ ದಾಖಲೆಗಳಿಂದ ಪ್ರತಿವಾದಿ 1(ಎ) ಮತ್ತು 1(ಡಿ) ರವರು 1ನೇ ಪ್ರತಿವಾದಿಯ ದತ್ತು ಮಕ್ಕಳೆಂದು ನಂಬಲಸಾಧ್ಯವಾಗಿದೆ. ನಿಡಿ-9 ಉಪನೊಂದಾಣಿ ಅಧಿಕಾರಿಯವರು ನೀಡಿರುವ ಸ್ವತ್ತಿನ ಮೌಲ್ಯ ದಾಖಲಾತಿಗಳನ್ನು ಹಾಜರುಪಡಿಸಿದ್ದು, ನಿಡಿ-10 ಪಂಚಾಯಿತಿಯವರು ನಿಡೀರುವ ದೃಢಿಕರಣ ಪತ್ರವನ್ನು ಗುರುತಿಸಲಾಯಿತು.

25. ಡಿ.ಡಬ್ಲ್ಯೂ-1 ರವರನ್ನು ವಾದಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಅವರು ಒಪ್ಪಿಕೊಂಡ ಕೆಲವು ಆಯ್ದ ಭಾಗಗಳನ್ನು ಉಲ್ಲೇಖಪಡಿಸಬಯಸುತ್ತೇನೆ. "ವೆಂಕಟೇಗೌಡ ಜೀವಿತ ಕಾಲದಲ್ಲಿ ಅವರ ಜೊತೆ ನಾನು ಮತ್ತು ಅವರ ತಮ್ಮ ಗೋವಿಂದೇಗೌಡ ವಾಸವಿದ್ದೆವು. ವೆಂಕಟೇಗೌಡ ನಮ್ಮನ್ನು ದತ್ತಕ ತೆಗೆದುಕೊಂಡಿದ್ದೇನೆ ಎಂದು ತನ್ನ ಹತ್ತಿರ ನಮ್ಮನ್ನು ಇಟ್ಟುಕೊಂಡಿದ್ದರು. ವೆಂಕಟೇಗೌಡ ದತ್ತಕ ಪತ್ರವನ್ನು ಬರೆದು ತಿಮ್ಮೇಗೌಡರ ಹತ್ತಿರ ಕೊಟ್ಟಿದ್ದರು. ತಿಮ್ಮೇಗೌಡ ದತ್ತಕ ಪತ್ರವನ್ನು ಸಹ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. " ಎಂದು ನುಡಿದಿರುತ್ತಾರೆ. ಡಿ.ಡಬ್ಲ್ಯೂ-1 ರವರು ತಮ್ಮ

ಪಾಟೀಸವಾಲಿನಲ್ಲಿ 1ನೇ ಪ್ರತಿವಾದಿ ನಮ್ಮನ್ನು ದತ್ತು ಪಡೆದ ಬಗ್ಗೆ ದತ್ತಕ ಪತ್ರವನ್ನು ಬರೆದು ತಿಮ್ಮೇಗೌಡರ ಬಳಿ ನೀಡಿದ್ದರು. ತಿಮ್ಮೇಗೌಡರು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ ಎಂದು ನುಡಿದಿದ್ದು, ಸದರಿ ತಿಮ್ಮೇಗೌಡ ರವರು ಡಿ.ಡಬ್ಲ್ಯೂ-2 ಎಂದು ಸಾಕ್ಷಿ ವಿಚಾರಣೆ ಮಾಡಿಕೊಂಡಿದ್ದು, ಅವರು ನ್ಯಾಯಾಲಯಕ್ಕೆ ಯಾವುದೇ ದತ್ತಕ ಪತ್ರವನ್ನು ಹಾಜರುಪಡಿಸಿರುವುದಿಲ್ಲ.

26. ಡಿ.ಡಬ್ಲ್ಯೂ-1 ರವರು ಹಾಜರುಪಡಿಸಿರುವ ನಿಡಿ-1ನ್ನು ಪರಿಶೀಲಿಸಲಾಗಿ, ಅದು ಮರಣ ಶಾಸನ ದಾಖಲೆಯಾಗಿದ್ದು ಅದರಲ್ಲಿ ಈ ಕೆಳಕಂಡಂತೆ ನಮೂದಾಗಿರುವುದು ಕಂಡು ಬರುತ್ತದೆ.

> ***ಸದರಿ ದಾಖಲೆಯನ್ನು 1ನೇ ಪ್ರತಿವಾದಿ 2ನೇ ಹೆಣ್ಣು ಮಗಳು ರಂಗೇಗೌಡನ ಹೆಂಡತಿ ಲೇಟ್ ಸಾವಿತ್ರಮ್ಮನ ಖಾಸಾ ಗಂಡು ಮಕ್ಕಳು 1ನೇ ಮೈನರ್ 17 ವರ್ಷದ ಚಂದ್ರೇಗೌಡ ಮತ್ತು 2ನೇ ಮೈನರ್ 15 ವರ್ಷದ ಗೋವಿಂದೇಗೌಡ ಇವರುಗಳ ಮೈನರ್ ಗಾರ್ಡಿಯನ್ ಅಜ್ಜಿ ಹೊಂಬಾಳಮ್ಮನವರಿಗೂ ಸಹ ಬರೆಸಿಟ್ಟ ವಿಲ್.*** *ಮುಂದುವರೆದು* ***ಚಂದ್ರೇಗೌಡ ಮತ್ತು 2ನೇ ಗೋವಿಂದೇಗೌಡ ಇವರುಗಳನ್ನು ನಾನೇ ಪೋಷಣೆ ಮಾಡಿರುತ್ತೇನೆ. ನನ್ನ ಪಿತ್ರಾರ್ಜಿತವಾದ ಷೆಡ್ಯೂಲ್ ನಲ್ಲಿ ನಮೂದಿಸಿರುವ ಆಸ್ತಿಗಳನ್ನು ಮೈನರ್ ಮಕ್ಕಳಿಗೆ ಮರಣ ಶಾಸನ ಬರೆಸಿಟ್ಟಿರುತ್ತೇನೆ. ಈ 2 ಜನ ಮೊಮ್ಮಕ್ಕಳು ನನ್ನ ಮತ್ತು ನನ್ನ ಹೆಂಡತಿಯರು ಹೊಂಬಾಳಮ್ಮ ಮತ್ತು ಜಯಮ್ಮ ಇವರುಗಳ ಪೋಷಣೆಯ ಸೌಕರ್ಯವನ್ನು ನಡೆಸಿಕೊಂಡು ಬರುತ್ತಾರೆಂಬ ನಂಬಿಕೆ ಇರುತ್ತದೆ. ಈ ಷೆಡ್ಯೂಲ್ ಸ್ವತ್ತುಗಳ ಸ್ವಾಧೀನ ಮತ್ತು ಹಕ್ಕು ಭಾದ್ಯತೆಗಳು ಎಲ್ಲವೂ ಸಹ ನನ್ನ ಮತ್ತು ನನ್ನ 1ನೇ ಹೆಂಡತಿ ಹೊಂಬಾಳಮ್ಮ, 2ನೇ ಹೆಂಡತಿ ಜಯಮ್ಮ ಇವರುಗಳ ಮರಣಾ ನಂತರ ಜಾರಿಗೆ ಬರತಕ್ಕದ್ದಾಗಿರುತ್ತದೆ. ಎಂದು ನಮೂದಾಗಿರುತ್ತದೆ.***

27. ಪ್ರತಿವಾದಿಯರು ತಮ್ಮ ಲಿಖಿತ ಹೇಳಿಕೆಯಲ್ಲಿ 1ನೇ ಪ್ರತಿವಾದಿ 1(ಎ) ಮತ್ತು 1(ಡಿ) ರವರನ್ನು ದತ್ತಕ ಪಡೆದಿರುತ್ತಾರೆ ಎಂದು ತಿಳಿಸಿರುತ್ತಾರೆ. ನಿಡಿ-1ನ್ನು ಪರಿಶೀಲಿಸಲಾಗಿ ನಿಡಿ-1 ರಲ್ಲಿ 1ನೇ ಪ್ರತಿವಾದಿಯು ನನ್ನ 2ನೇ ಹೆಣ್ಣು

ಮಗಳು ರಂಗೇಗೌಡನ ಹೆಂಡತಿ ಸಾವಿತ್ರಮ್ಮಳ ಖಾಸಾ ಗಂಡು ಮಕ್ಕಳು 1ನೇ ಚಂದ್ರೇಗೌಡ, 2ನೇ ಗೋವಿಂದೇಗೌಡ ಎಂದು ಹೇಳಿರುವುದು ಕಂಡು ಬರುತ್ತದೆ. ನಿಡಿ-1 ರಲ್ಲಿ ಎಲ್ಲಿಯೂ ಸಹ 1ನೇ ಪ್ರತಿವಾದಿ 1(ಎ) ಮತ್ತು 1(ಡಿ) ರವರು ನನ್ನ ದತ್ತು ಮಕ್ಕಳು ಎಂದು ಹೇಳಿರುವುದಿಲ್ಲ. ಮುಂದುವರೆದು ನಿಡಿ-1 ರಲ್ಲಿ ಈ ಷೆಡ್ಯೂಲ್ ಸ್ವತ್ತುಗಳ ಸ್ವಾಧೀನ ಮತ್ತು ಹಕ್ಕು ಭಾದ್ಯತೆಗಳು ಎಲ್ಲವೂ ಸಹ ನನ್ನ ಮತ್ತು ನನ್ನ ಮೊದಲನೇ ಹೆಂಡತಿ ಹೊಂಬಾಳಮ್ಮ, 2ನೇ ಹೆಂಡತಿ ಜಯಮ್ಮ ಇವರುಗಳ ಮರಣಾ ನಂತರ ಜಾರಿಗೆ ಬರತಕ್ಕದ್ದಾಗಿರುತ್ತದೆ ಎಂದು ನಮೂದಾಗಿದ್ದು, ನಿಡಿ-1 ರಲ್ಲಿ ನಮೂದಾಗಿರುವಂತೆ 1ನೇ ಪ್ರತಿವಾದಿಯ ಜೀವಿತ ಕಾಲದಲ್ಲಿ ಷೆಡ್ಯೂಲ್ ಸ್ವತ್ತುಗಳ ಹಕ್ಕು ಸ್ವಾಧೀನ ಯಾರಿಗೂ ಇರುವುದಿಲ್ಲ. ಡಿ.ಡಬ್ಲ್ಯೂ-1 ರವರು ತಮ್ಮ ಪಾಟೀಸವಾಲಿನಲ್ಲಿ **ನಿಡಿ-1 ರಲ್ಲಿ ಕಾಣಿಸಿದ ಆಸ್ತಿಗಳು ವೆಂಕಟೇಗೌಡನ ಜೀವಿತ ಕಾಲದವರೆಗೆ ವೆಂಕಟೇಗೌಡರನ್ನು ಹೊರತುಪಡಿಸಿ ಬೇರೆ ಯಾರಿಗೂ ಹಕ್ಕು ಇಲ್ಲ ಎಂದು ಕಾಣಿಸಿದ್ದಾರೆ ಎಂದರೆ ಸರಿ. ತಿಮ್ಮೇಗೌಡರಿಂದ ಹಾಜರುಮಾಡಲಾದ ಪತ್ರವನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ಆದ್ದರಿಂದ ನಿಡಿ-1 ರಲ್ಲಿ ಏನು ಬರೆದಿಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದರೆ ಸರಿ.** ಎಂದು ನುಡಿದಿರುತ್ತಾರೆ . ಆದರೆ ದಾವಾ ಐಟಂ ನಂ.6 ಮತ್ತು 7 ಸ್ವತ್ತುಗಳು ನಿಡಿ-1 ರಲ್ಲಿ ನಮೂದಾಗಿದ್ದು, 1ನೇ ಪ್ರತಿವಾದಿಯ ಜೀವಿತ ಕಾಲದಲ್ಲಿ ದಾವಾ ಐಟಂ ನಂ. 7 ಸರ್ವೆ. ನಂ. 4/19 ರಲ್ಲಿ 11 ಗುಂಟೆ ಸ್ವತ್ತು ಎಂ. ಆರ್. 26/2004-05, ದಾವಾ ಐಟಂ ನಂ. 6 ಸರ್ವೆ. 84/1 ಎಂ.ಆರ್. 26/2004-05 ರಂತೆ 1(ಡಿ) ಗೊಂವಿಂದೇಗೌಡ ರವರ ಹೆಸರಿಗೆ ಖಾತೆಯಾಗಿರುವುದು ಕಂಡು ಬರುತ್ತದೆ. 1ನೇ ಪ್ರತಿವಾದಿಯ 2ನೇ ಹೆಂಡತಿ ಜಯಮ್ಮ (3ನೇ ಪ್ರತಿವಾದಿ) ಇನ್ನೂ ಜೀವಂತವಿರುವುದು ಕಂಡು ಬರುತ್ತದೆ.

28. 1ನೇ ಪ್ರತಿವಾದಿಯು ನಿಡಿ-1 ರಲ್ಲಿ ಪ್ರತಿವಾದಿ 1(ಎ) ಮತ್ತು 1(ಡಿ) ರವನ್ನು ದತ್ತು ತೆಗೆದುಕೊಂಡಿರುವ ಬಗ್ಗೆ ಉಲ್ಲೇಖ ಇರುವುದಿಲ್ಲ. ನಿಡಿ-1 ರಲ್ಲಿ 1ನೇ ಪ್ರತಿವಾದಿಯು ತನ್ನ ಪಿತ್ರಾರ್ಜಿತ ಸ್ವತ್ತುಗಳನ್ನು 1(ಎ) ಮತ್ತು 1(ಡಿ) ರವರಿಗೆ ಮರಣ ಶಾಸನ ಬರೆಸಿಟ್ಟಿರುತ್ತೇನೆ ಎಂಬ ಉಲ್ಲೇಖ ಇದ್ದು, ನಿಡಿ-1 ರಲ್ಲಿ

ನಮೂದಾಗಿರುವ ಸ್ವತ್ತುಗಳು 1ನೇ ಪ್ರತಿವಾದಿಯ ಪಿತ್ರಾರ್ಜಿತ ಸ್ವತ್ತುಗಳಾಗಿರುವುದು ಕಂಡು ಬರುತ್ತದೆ. ಪ್ರತಿವಾದಿ 1 ಮತ್ತು 2 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ ಕೆಲವು ಸ್ವತ್ತುಗಳನ್ನು 2ನೇ ಮಗಳು ಸಾವಿತ್ರಮ್ಮಳ ಮನೆಯಿಂದ ಹಣ ತಂದು ಖರೀದಿಸಿದ್ದು ಅವುಗಳನ್ನು ಕುಟುಂಬದ ವ್ಯವಸ್ಥೆಗೋಸಕ್ಕರ ಸಾವಿತ್ರಮ್ಮನ ಗಂಡನ ಅಣ್ಣತಮ್ಮಂದಿರು ಹಿಸ್ಸೆಗೆ ಬರುತ್ತಾರೆಂಬ ಉದ್ದೇಶದಿಂದ ಕೆಲವು ಸ್ವತ್ತುಗಳನ್ನು 1ನೇ ಪ್ರತಿವಾದಿಯ ಹೆಸರಿಗೆ ಕ್ರಯಕ್ಕೆ ಕೊಂಡು ಕೊಂಡು ಬರೆಸಿಕೊಂಡಿರುತ್ತಾರೆ ಎಂದು ತಿಳಿಸಿದ್ದು, ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳನ್ನು ಮತ್ತು ನುಡಿಸಾಕ್ಷ್ಯವನ್ನು ತಮ್ಮ ವಿಚಾರಣೆಯಾಗಿ ಮಾಡಿಕೊಂಡಿರುವುದಿಲ್ಲ. ವಾದಿಯು 1ನೇ ಪ್ರತಿವಾದಿಯ ನೈಸರ್ಗಿಕ ಮಗಳಾಗಿರುತ್ತಾಳೆ. 1ನೇ ಪ್ರತಿವಾದಿ ಪಿತ್ರಾರ್ಜಿತ ಸ್ವತ್ತುಗಳಲ್ಲಿ ಹಿಸ್ಸೆ ನೀಡಿರುವುದು ಕಂಡು ಬರುವುದಿಲ್ಲ. ಆದ್ದರಿಂದ ದಾವಾ ಸ್ವತ್ತುಗಳು 1ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತುಗಳಾಗಿರುವುದಿಲ್ಲ. ವಾದಿ ಮತ್ತು 1, 2 ನೇ ಪ್ರತಿವಾದಿಗಳ ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತುಗಳಾಗಿರುತ್ತದೆ.

29. ಡಿ.ಡಬ್ಲ್ಯೂ-1 ರವರು ತಮ್ಮ ಪಾಟೀಸವಾಲಿನಲ್ಲಿ 1ನೇ ಪ್ರತಿವಾದಿಯು ಮರಣ ಶಾಸನವನ್ನು ಹೊರತುಪಡಿಸಿ ಬೇರೆ ವಿಭಾಗ ಪತ್ರ, ವಗೈರೆ ಮಾಡಿಕೊಟ್ಟಿರುವುದಿಲ್ಲ ಎಂದು ನುಡಿದಿದ್ದು, ಇದರಿಂದ ವಾದಿಗೆ 1ನೇ ಪ್ರತಿವಾದಿ ದಾವಾ ಸ್ವತ್ತುಗಳಲ್ಲಿ ಹಿಸ್ಸೆ ನೀಡಿಲ್ಲದಿರುವುದು ಕಂಡು ಬರುತ್ತದೆ. ಪ್ರತಿವಾದಿ 1(ಎ) ಮತ್ತು 1(ಡಿ) ರವರು ತಮ್ಮ ಲಿಖಿತ ಹೇಳಿಕೆಯಲ್ಲಿ ವಾದಿಗೆ 1ನೇ ಪ್ರತಿವಾದಿ ದಿಃ 11-03-1992 ಒಂದು ಪಂಚಾಯತಿ ಕರಾರು ಪತ್ರವನ್ನು ಬರೆದುಕೊಟ್ಟು ಸರ್ವೆ. ನಂ. 4/19 ರಲ್ಲಿ 5 ವರೆ ಗುಂಟೆ, ಸರ್ವೆ. 87/3 ರಲ್ಲಿ 4 ವರೆ ಗುಂಟೆ ಸ್ವತ್ತನ್ನು ಮಾರಮ್ಮನ ದೇವಸ್ಥಾನದ ಬಳಿ ಒಂದು ಮನೆಯನ್ನು ವಾದಿಗೆ ನೀಡಿರುತ್ತಾರೆ ಎಂದು ತಿಳಿಸಿದ್ದು, ಅದಕ್ಕೆ ಸಂಬಂಧಪಟ್ಟ ಯಾವುದೇ ಪಂಚಾಯತಿ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಮತ್ತು ನುಡಿಸಾಕ್ಷ್ಯವನ್ನು ಮಾಡಿಕೊಂಡಿರುವುದಿಲ್ಲ.

30. ಡಿ.ಡಬ್ಲ್ಯೂ-1 ರವರು ತಮ್ಮ ಪಾಟೀಸವಾಲಿನಲ್ಲಿ ನಿಡಿ-1 ರಲ್ಲಿ ಷೆಡ್ಯೂಲ್ ಸ್ವತ್ತುಗಳ ಸ್ವಾಧೀನ ಮತ್ತು ಹಕ್ಕು ಭಾದ್ಯತೆಗಳು ಎಲ್ಲವೂ ಸಹ ನನ್ನ 1ನೇ ಹೆಂಡತಿ ಹೊಂಬಾಳಮ್ಮ ಮತ್ತು 2ನೇ ಹೆಂಡತಿ ಜಯಮ್ಮ ಇವರುಗಳ ಮರಣಾ ನಂತರ ಜಾರಿಗೆ ಬರತಕ್ಕದ್ದಾಗಿರುತ್ತದೆ ಎಂದು ನಮೂದಾಗಿರುತ್ತದೆ. 1ನೇ ಪ್ರತಿವಾದಿಯ 2ನೇ ಹೆಂಡತಿ ಜಯಮ್ಮ ಈ ದಾವೆಯಲ್ಲಿ 3ನೇ ಪ್ರತಿವಾದಿಯಾಗಿದ್ದು, ಇನ್ನೂ ಜೀವಂತವಾಗಿರುವುದು ಕಂಡು ಬರುತ್ತದೆ. ಪ್ರತಿವಾದಿ 1(ಎ) ಮತ್ತು 1(ಡಿ) ರವರು 1ನೇ ಪ್ರತಿವಾದಿಯ ದತ್ತು ಮಕ್ಕಳೆಂದು ಸಾಬೀತುಪಡಿಸಲು ಯಾವುದೇ ಪೂರಕ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ವಾದಿಯು 1ನೇ ಪ್ರತಿವಾದಿಯ ನೈಸರ್ಗಿಕ ಮಗಳಾಗಿದ್ದು, ಆಕೆಗೆ ದಾವಾ ಸ್ವತ್ತುಗಳಲ್ಲಿ ಹಿಸ್ಸೆ ನೀಡಿರುವ ಬಗ್ಗೆ ಯಾವುದೇ ಪೂರಕ ದಾಖಲೆಗಳಿರುವುದಿಲ್ಲ. ನಿಡಿ-1 ರಲ್ಲಿ ನಮೂದಾಗಿರುವ ಸ್ವತ್ತುಗಳು 1ನೇ ಪ್ರತಿವಾದಿಯ ಪಿತ್ರಾರ್ಜಿತ ಸ್ವತ್ತುಗಳಾಗಿರುತ್ತವೆ ಎಂದು ನಿಡಿ-1 ರಲ್ಲಿ ನಮೂದಾಗಿರುತ್ತದೆ. 1ನೇ ಪ್ರತಿವಾದಿ ಮತ್ತು ಹೊಂಬಾಳಮ್ಮ, ಜಯಮ್ಮರವರ ಮರಣಾ ನಂತರ ನಿಡಿ-1 ರಲ್ಲಿ ನಮೂದಾಗಿರುವ ಸ್ವತ್ತುಗಳ ಸ್ವಾಧೀನ ಮತ್ತು ಹಕ್ಕು ಭಾದ್ಯತೆ ಜಾರಿಗೆ ಬರತಕ್ಕದ್ದಾಗಿರುತ್ತದೆ ಎಂದು ನಮೂದಾಗಿದ್ದು 3ನೇ ಪ್ರತಿವಾದಿ ಜಯಮ್ಮ ಇನ್ನೂ ಜೀವಂತವಿರುವುದರಿಂದ ನಿಡಿ-1 ರ ಪ್ರಕಾರ 2(a) (d) ಪ್ರತಿವಾದಿಗಳಿಗೆ ಯಾವುದೇ ಕಾನೂನು ಬದ್ದ ಹಕ್ಕು ಪ್ರಾಪ್ತವಾಗುವುದಿಲ್ಲ.

31. ವಾರಸು ಅಧಿ ನಿಯಮ 2005 ಕಲಂ 6 ರಂತೆ ದಿನಾಂಕ 09-09-2005 ತಿದ್ದು ಪಡಿ ಕಾನೂನು ಜಾರಿಗೆ ಬರುವ ಸಮಯದಲ್ಲಿ ಮಗಳು ಮತ್ತು ತಂದೆ ಜೀವಂತವಾಗಿ ಇದ್ದಾಗ ಸಮನಾದ ಹಿಸ್ಸಾ ಹಕ್ಕನ್ನು ಮಗಳು ಹೊಂದುತ್ತಾಳೆ. 1ನೇ ಪ್ರತಿವಾದಿಯ ಮಕ್ಕಳಾದ ವಾದಿ ಮತ್ತು ಮೃತ ಸಾವಿತ್ರಮ್ಮ ರವರು ದಾವಾ ಸ್ವತ್ತುಗಳಲ್ಲಿ 1/3 ನೇ ಭಾಗಾಂಶಕ್ಕೆ ಅರ್ಹರಾಗಿರುತ್ತಾರೆ. ಈಗಾಗಲೇ ಸಾವಿತ್ರಮ್ಮ ರವರು ಮರಣ ಹೊಂದಿರುವ ಕಾರಣ ಅವರ ಮಕ್ಕಳಾದ 2(a) ರಿಂದ (f) ಪ್ರತಿವಾದಿಗಳು ಅವರ ತಾಯಿ ಸಾವಿತ್ರಮ್ಮ ರವರ 1/3 ನೇ ಭಾಗಂಶದಲ್ಲಿ 1/6 ನೇ

ಭಾಗಾಂಶಕ್ಕೆ ಅರ್ಹರಾಗಿರುತ್ತಾರೆ. 3 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಹೆಂಡತಿಯಾಗಿರುವ ಕಾರಣ ದಾವಾಸ್ವತ್ತುಗಳಲ್ಲಿ ಭಾಗಾಂಶದ ಹಕ್ಕು ಹೊಂದಿರುವುದಿಲ್ಲ. ಆದ್ದರಿಂದ ವಾದಿಗೆ ದಾವಾ ಸ್ವತ್ತುಗಳಲ್ಲಿ ಸಮನಾದ ಹಿಸ್ಸಾ ಹಕ್ಕು ಇದೆ ಎಂದು ಅಭಿಪ್ರಾಯಪಟ್ಟು ವಿವಾದಾಂಶ 1 ಮತ್ತು 2ನ್ನು **ಸಕಾರಾತ್ಮಕವಾಗಿ** ಹೆಚ್ಚುವರಿ ವಿವಾದಾಂಶ 1 ರಿಂದ 4ನ್ನು **ನಕಾರಾತ್ಮಕವಾಗಿ** ಎಂದು ಉತ್ತರಿಸಿದ್ದೇನೆ .

32. **ವಿವಾದಾಂಶಃ 3** ವಾದಿಯು ಪ್ರತಿವಾದಿಯರ ವಿರುದ್ಧ ಪ್ರತ್ಯೇಕ ಹಿಸ್ಸೆ ಮತ್ತು ಸ್ವಾಧೀನ ಕೋರಿ ದಾವಾ ದಾಖಲಿಸಿದ್ದು, ಪ್ರತಿವಾದಿಯರು ತಮ್ಮ ಲಿಖಿತ ಹೇಳಿಕೆಯಲ್ಲಿ 1ನೇ ಪ್ರತಿವಾದಿ ವೆಂಕಟೇಗೌಡರ 2ನೇ ಹೆಂಡತಿ ಜಯಮ್ಮ ಸಹಾ ಬದುಕಿದ್ದು, ಅವಳನ್ನು 1ನೇ ಪ್ರತಿವಾದಿಯ ಕಾನೂನುಬದ್ಧ ವಾರಸುದಾರರೆಂದು ದಾವಾದಲ್ಲಿ ಸೇರಿಸದೇ ಕೈಬಿಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ಅದೇರೀತಿ, ಸಾವಿತ್ರಮ್ಮ ರವರ ಮಕ್ಕಳನ್ನು ವೆಂಕಟೇಗೌಡ ಮತ್ತು ಹೊಂಬಾಳಮ್ಮ ರವರ ದತ್ತು ಸ್ವೀಕರಿಸಿದ ಕಾರಣ ಅವರು ದಾವೆಗೆ ಅವಶ್ಯಕ ಪಕ್ಷಗಾರರಾಗಿದ್ದು, ಸದರಿಯವರನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ. ಆದುದರಿಂದ ದಾವೆಯು ಅವಶ್ಯಕ ಪಕ್ಷಗಾರರಿಂದ ಬಾದಿಸಲಾಗಿದೆ ಎಂದು ಪ್ರತಿವಾದಿಸಿದ್ದು, ದತ್ತು ಸ್ವೀಕಾರವನ್ನು ರುಜುವಾತುಪಡಿಸದ ಕಾರಣ ಮತ್ತು 3ನೇ ಪ್ರತಿವಾದಿಯು 1ನೇ ಪ್ರತಿವಾದಿಯ 2 ನೇ ಹೊಂಡತಿಯಾಗಿದ್ದು, 1ನೇ ಪ್ರತಿವಾದಿಯು ಬದುಕಿದ್ದಾಗಲೇ ಆತನ ಪಿತ್ರಾರ್ಜಿತ ಅಸ್ತಿಯಲ್ಲಿ ವಿಭಾಗಾಂಶ ಹೊಂದಲು ಹಕ್ಕುಳವರಾಗಿರುವುದಿಲ್ಲ. ಆದುದರಿಂದ, ಸದರಿಯವರು ದಾವದ ಅವಶ್ಯಕ ಪಕ್ಷಗಾರಾಗಿರುವುದಿಲ್ಲ. ಆದುದರಿಂದ ವಿವಾದಾಂಶ 3ನ್ನು **ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

33. **ವಿವಾದಾಂಶಃ 4** ವಾದಿಯು ಕರ್ನಾಟಕ ದಾವಾ ಶುಲ್ಕ ಅಧಿನಿಯಮ 35 ರಡಿಯಲ್ಲಿ ನ್ಯಾಯಾಲಯದ ಶುಲ್ಕವನ್ನು ತನ್ನ ಹಿತಾಸಕ್ತಿಗೆ ಬರಬೇಕಾದ 15 /- ರೂಗಳನ್ನು ಪಾವತಿಸಿರುವುದು ಸರಿಯಾಗಿದೆ ಮತ್ತು ದಾವೆಯ ಮೌಲ್ಯಮಾ

ಪನ ವಾದ ಪತ್ರದಲ್ಲಿ ತೋರಿಸಿರುವಂತೆ ವಾದಿಯು ದಾವೆ ನಡೆಸಲು ಈ ನ್ಯಾಯಾಲಯಕ್ಕೆ ನ್ಯಾಯಾಧೀಕರಣ ಇರುತ್ತದೆ. ಪ್ರತಿವಾದಿಯರು ಈ ಕಾನೂನಿನಡಿಯಲ್ಲಿ ನಡೆಯಲು ನ್ಯಾಯಾಧೀಕರಣ ಇಲ್ಲ ಎಂದು ತಮ್ಮ ಲಿಖಿತ ಹೇಳಿಕೆಯಲ್ಲಿ ಹೇಳಿದ್ದರೂ ಸಹ ಅದಕ್ಕೆ ಪೂರಕವಾಗಿ ನಿಡಿ-9 ನ್ನು ಹಾಜರುಪಡಿಸಿದ್ದು, ಸದರಿ ದಾಖಲೆಯಿಂದ ದಾವಾಸ್ವತ್ತುಗಳ ಮೌಲ್ಯವನ್ನು ನಿರ್ಧರಿಸಲು ಸಾಧ್ಯವಾಗುವುದಿಲ್ಲ ಮತ್ತು ಸದರಿ ದಾಖಲೆಗಳು ಪ್ರತಿವಾದಿಗಳಿಗೆ ಸಹಕಾರಿಯಾಗವುದಿಲ್ಲ. ಆದ್ದರಿಂದ ವಿವಾದಾಂಶಃ 4 ನ್ನು **ನಕಾರಾತ್ಮಕವಾಗಿ** ಉತ್ತರಿಸಿದ್ದೇನೆ.

34. **ವಿವಾದಾಂಶಃ** 5 ಈ ಮೇಲಿನ ಚರ್ಚೆ ಮತ್ತು ಅವುಗಳಿಗೆ ನೀಡಲಾದ ಉತ್ತರಗಳಿಂದ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**-ಆದೇಶಃ**

ವಾದಿಯ ದಾವೆಯನ್ನು ಡಿಕ್ರಿ ಮಾಡಲಾಗಿದೆ.

ವಾದಿ ಮತ್ತು ಅವರ ಸಹೋದರಿ ಮೃತ ಸಾವಿತ್ರಮ್ಮರವರು ಹಾಗೂ 1ನೇ ಪ್ರತಿವಾದಿ ದಾವಾಸ್ವತ್ತುಗಳಲ್ಲಿ ತಲಾ 1/3 ನೇ ಭಾಗಾಂಶಕ್ಕೆ ಅರ್ಹರಾಗಿರುತ್ತಾರೆ. ಸಾವಿತ್ರಮ್ಮ ರವರು ಮೃತರಾಗಿರುವ ಕಾರಣ ಅವರ ಮಕ್ಕಳಾದ 2 (a) ರಿಂದ (f) ರವರು ತಮ್ಮ ತಾಯಿಯ 1/3 ನೇ ಭಾಗಾಂಶದಲ್ಲಿ ತಲಾ 1/6 ನೇ ಭಾಗಾಶಕ್ಕೆ ಅರ್ಹರಾಗಿರುತ್ತಾರೆ.

ಈ ಮೇಲಿನ ಆದೇಶದಂತೆ ಪ್ರಾಥಮಿಕ ಡಿಕ್ರಿ ಬರೆಯುವುದು.

In view of the directions issued by the Hon'ble Apex Court in a Judgment reported in 2022 SCC On-line SC 737 (Kattukandi Edathil Krishnan and another V/s

Kattukandi Edathil Valsan and others) and Circular No.DJA-1/1105 dated 21.10.2022 issued by Hon'ble High Court of Karnataka, when the preliminary decree is passed in a partition suit, the Court has to initiate final decree proceedings under Order 20 Rule 18 of CPC by suo moto.

Hence, office is directed to register a Final Decree Proceedings under Order 20 Rule 18 of CPC based on preliminary decree after appeal period is over and keep a certified copy of preliminary decree passed in this suit and other records in the FDP proceedings.

(ಈ ಆದೇಶವನ್ನು ಶೀಘ್ರಲಿಪಿಗಾರ್ತಿಗೆ ನೇರವಾಗಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ, ಅದನ್ನು ಓದಿ, ತಪ್ಪುಗಳನ್ನು ತಿದ್ದಿ, ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 17 ನೇ ದಿವಸ ಜೂನ್ ಮಾಹೆ 2026 ರಂದು ನಾನು ಘೋಷಿಸಿದ್ದೇನೆ.)

**(ಪುರುಷೋತ್ತಮ ಟಿ.ಪಿ.)**
1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ.

-: **ಅನುಬಂಧ** : -

**1. ವಾದಿಯ ಪರ ವಿಚಾರಿಸಲಾದ ಸಾಕ್ಷಿಗಳುಃ**

ಪಿ.ಡಬ್ಲ್ಯೂ-1 : ಜಯಮ್ಮ

**2. ವಾದಿಯ ಪರ ಗುರುತಿಸಲಾದ ದಾಖಲೆಗಳುಃ**

ನಿಶಾನೆ ಪಿ-1 ರಿಂದ 16 : 16 ಪಹಣಿಗಳು

ನಿಶಾನೆ ಪಿ-17 ಮತ್ತು 18 : ಕರ ನಿರ್ಧರಣಾ ಪತ್ರ

ನಿಶಾನೆ ಪಿ-19ಮತ್ತು 20 : 2 ಆರ್.ಟಿ.ಸಿ

ನಿಶಾನೆ ಪಿ-21 ರಿಂದ 31 : 12 ಪಹಣಿಗಳು

**3. ಪ್ರತಿವಾದಿಯರ ಪರ ವಿಚಾರಿಸಲಾದ ಸಾಕ್ಷಿಗಳುಃ**

ಡಿ.ಡಬ್ಲ್ಯೂ-1 : ಚಂದ್ರು

ಡಿ.ಡಬ್ಲ್ಯೂ-2 : ತಿಮ್ಮೇಗೌಡ

ಡಿ.ಡಬ್ಲ್ಯೂ-3 : ಸಿ.ಎನ್. ಸುಬ್ಬಣ್ಣ

ಡಿ.ಡಬ್ಲ್ಯೂ-4 : ಲಕ್ಷ್ಮಿನಾರಾಯಣ ಉಃ ಕುಮಾರ

ಡಿ.ಡಬ್ಲ್ಯೂ-5 : ಶಶಿಧರ್ ಎಂ.ಹೆಚ್.

**4. ಪ್ರತಿವಾದಿಯರ ಪರವಾಗಿ ಹಾಜರು ಪಡಿಸಿದ ದಾಖಲೆಗಳುಃ**

ನಿಶಾನೆ ಡಿ.1 : ಮರಣ ಶಾಸನ ಪತ್ರ

ನಿಶಾನೆ ಡಿ-2 ಮತ್ತು 3 : ವಿವಾಹ ಆಮಂತ್ರಣ ಪತ್ರಿಕೆ

ನಿಶಾನೆ ಡಿ-4 ಮತ್ತು 5 : ಆಧಾರ ಕಾರ್ಡ್

ನಿಶಾನೆ ಡಿ-6 ಮತ್ತು 7 : ಮತದಾರರ ಗುರುತಿನ ಚೀಟಿ

ನಿಶಾನೆ ಡಿ-8 : ಶೇರ್ ಸರ್ಟಿಫಿಕೇಟ್

ನಿಶಾನೆ ಡಿ-9 : ಸ್ವತ್ತಿನ ಮೌಲ್ಯ ದಾಖಲಾತಿ

ನಿಶಾನೆ ಡಿ-10 : ಗ್ರಾಮ ಪಂಚಾಯಿತಿಯ ಧೃಡೀಕರಣ ಪತ್ರ

(ಪುರುಷೋತ್ತಮ ಟಿ.ಪಿ.)
1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ.